# ಅಧ್ಯಾಯ – ೧೧

## ಇತರ ಇಲಾಖೆಗಳು

**ಜ**ನ ಸಾಮಾನ್ಯರ ಕಲ್ಯಾಣವನ್ನು ಬಯಸುವ ಆಡಳಿತಾರೂಢ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಹಲವು ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿರುತ್ತವೆ. ಈ ಯೋಜನೆಗಳನ್ನು ಸಂಬಂಧಿಸಿದ ಇಲಾಖೆ, ಮಂಡಳಿ, ನಿಗಮ ಮೊದಲಾದವುಗಳ ಮೂಲಕ ಕಾರ್ಯರೂಪಕ್ಕೆ ತರಲಾಗುತ್ತಿದೆ. ಈ ಗ್ಯಾಸೆಟಿಯರ್‌ನ ಇತರ ಕೆಲವು ಅಧ್ಯಾಯಗಳಲ್ಲಿ ಕೆಲವೊಂದು ಇಲಾಖೆಗಳ ಕಾರ್ಯಚಟುವಟಿಕೆಗಳ ಬಗೆಗೆ ಪ್ರಸ್ತಾಪಿಸಲಾಗಿದೆ. ಆದರೆ ಪ್ರಸ್ತುತ ಅಧ್ಯಾಯದಲ್ಲಿ ಉಡುಪಿ ಜಿಲ್ಲೆಯಲ್ಲಿನ ವಿವಿಧ ಇಲಾಖೆಗಳು, ಮಂಡಳಿ ಹಾಗೂ ನಿಗಮಗಳ ಸ್ಥಾಪನೆ, ಕಛೇರಿಯ ಸಿಬ್ಬಂದಿ ಸ್ವರೂಪ, ಆಡಳಿತ ವ್ಯಾಪ್ತಿ, ಅವುಗಳ ಧ್ಯೇಯೋದ್ದೇಶ, ಕಾರ್ಯಚಟುವಟಿಕೆ ಮುಂತಾದವುಗಳ ಬಗೆಗೆ ಆಯಾ ಕಛೇರಿಗಳು ಒದಗಿಸಿದ ಮಾಹಿತಿ ಆಧರಿಸಿ ಸಂಕ್ಷಿಪ್ತ ಪರಿಚಯ ಮಾಡಿಕೊಡಲಾಗಿದೆ. ಅಧಿಕಾರಿ ವರ್ಗ, ಅಧ್ಯಯನಶೀಲ ವಿದ್ವಾಂಸ ಸಮೂಹ ಹಾಗೂ ಸಾರ್ವಜನಿಕರು ಜಿಲ್ಲೆಯಲ್ಲಿನ ಆಡಳಿತ ಯಂತ್ರದ ಬಗೆಗೆ ಸ್ಥೂಲ ಪರಿಚಯ ಮಾಡಿಕೊಳ್ಳಲು ಇಲ್ಲಿನ ಮಾಹಿತಿಗಳು ನೆರವಾಗುತ್ತವೆ. ಸರ್ಕಾರದ ಇಲಾಖಾ ಕಛೇರಿಗಳು ಸಾಮಾನ್ಯವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಒಂದೇ ರೀತಿ ಇರುವುದು ಸಹಜವಾಗಿದ್ದರೂ, ಪ್ರಾದೇಶಿಕ ಅಗತ್ಯ ಮತ್ತಿತರ ಉದ್ದೇಶಗಳೊಂದಿಗೆ ಕೆಲವೊಂದು ಇಲಾಖಾ ಕಛೇರಿಗಳು ಕೆಲವು ಜಿಲ್ಲೆಗಳಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಗಮನಿಸಬೇಕಾಗಿದೆ.

### ಅಬಕಾರಿ ಇಲಾಖೆ

ಅಬಕಾರಿ ವಸ್ತುಗಳ ಬಳಕೆ, ಕಾನೂನು ಬಾಹಿರ ಚಟುವಟಿಕೆಗಳ ನಿಯಂತ್ರಣ ಹಾಗೂ ಅಬಕಾರಿ ವರಮಾನ ಹೆಚ್ಚಳದ ಉದ್ದೇಶದಿಂದ ೧೯೯೯ರಲ್ಲಿ ಅಬಕಾರಿ ಉಪ ಆಯುಕ್ತರ ಕಛೇರಿ ಉಡುಪಿ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿತು. ಅದಕ್ಕೂ ಮೊದಲು ಉಡುಪಿ ಜಿಲ್ಲೆಯು ಹಿಂದಿನ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿದ್ದು, ಅಲ್ಲಿ ೧೯೭೩ರಲ್ಲಿ ಅಬಕಾರಿ ಅಧೀಕ್ಷಕರ ಕಾರ್ಯಾಲಯವು ಅಸ್ತಿತ್ವಕ್ಕೆ ಬಂದಿತ್ತು. ಇವರು ಅಬಕಾರಿ ಉಪ–ಆಯುಕ್ತರು ಮಂಗಳೂರು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಪ್ರಸ್ತುತ ಉಡುಪಿಯು ದಕ್ಷಿಣ ಕನ್ನಡ ಜಿಲ್ಲೆಯಿಂದ ೧೯೯೭–೯೮ರಲ್ಲಿ ಪ್ರತ್ಯೇಕಗೊಂಡಿದೆ. ಅಬಕಾರಿ ಇಲಾಖೆಯ ಮುಖ್ಯಸ್ಥರಾಗಿ ಉಪ ಅಬಕಾರಿ ಆಯುಕ್ತರು ಕರ್ತವ್ಯ ನಿರತರಾಗಿದ್ದು, ಕುಂದಾಪುರ, ಉಡುಪಿ ಹಾಗೂ

ಕಾರ್ಕಳ ತಾಲೂಕುಗಳು ಅವರ ವ್ಯಾಪ್ತಿಗೆ ಒಳಪಡುತ್ತವೆ. ಈ ಕಛೇರಿಯ ಅಧೀನದಲ್ಲಿ ಉಡುಪಿ, ಕುಂದಾಪುರ ಹಾಗೂ ಕಾರ್ಕಳ ವಲಯ ಕಛೇರಿಗಳು ಇದ್ದು, ಈ ಕಛೇರಿಗಳು ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ. ಅಲ್ಲದೆ ಉಡುಪಿ ಜಿಲ್ಲೆಯಲ್ಲಿ ಒಂದು ಡಿಸ್ಟಿಲರಿ ಮತ್ತು ಒಂದು ಕೆ.ಎಸ್.ಬಿ.ಸಿ.ಎಲ್. ಡಿಪೋ ಕಛೇರಿಯು ಉಡುಪಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಜಿಲ್ಲೆಯಲ್ಲಿ ಜಾರಿ ಮತ್ತು ತನಿಖೆ ವಿಭಾಗದ ನಾಲ್ಕು ಕಛೇರಿಗಳಿದ್ದು, ಇದರಲ್ಲಿ ಉಡುಪಿ ಉಪ ವಿಭಾಗ ಕಛೇರಿಯು ಒಂದಾಗಿದೆ. ಈ ಕಛೇರಿಯು ಉಡುಪಿ ಜಿಲ್ಲಾ ವ್ಯಾಪ್ತಿಯನ್ನು ಒಳಗೊಂಡಿರುತ್ತದೆ. ಈ ಕಛೇರಿಯ ಅಧೀನದಲ್ಲಿ ಮೂರು ಜಾರಿ ಮತ್ತು ತನಿಖಾ ಕಛೇರಿಗಳಿದ್ದು, ಈ ಕಛೇರಿಗಳು ಉಡುಪಿ, ಕುಂದಾಪುರ ಹಾಗೂ ಕಾರ್ಕಳ ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ. ಅಲ್ಲದೆ ಗುಪ್ತ ವಾರ್ತಾದಳ ಕಛೇರಿ ಇದ್ದು, ಈ ಕಛೇರಿಯು ಉಡುಪಿ ಜಿಲ್ಲೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಗೆ ಒಂದೇ ಕಛೇರಿಯಾಗಿರುತ್ತದೆ. ಇ.ಐ.ಬಿ ಕಛೇರಿಯು ಉಡುಪಿ ಜಿಲ್ಲೆ ಕಾರ್ಯ ವ್ಯಾಪ್ತಿಯನ್ನೊಳಗೊಂಡಿರುತ್ತದೆ. ಈ ಇಲಾಖೆಯು ಸರ್ಕಾರಕ್ಕೆ ಹೆಚ್ಚಿನ ರಾಜಸ್ವವನ್ನು ತಂದು ಕೊಡುವ ಇಲಾಖೆಗಳಲ್ಲಿ ಒಂದಾಗಿದ್ದು, ಸರಾಯಿ ಚಿಲ್ಲರೆ ಮಾರಾಟದ ಗುತ್ತಿಗೆ ಹಕ್ಕಿನ ವಿಲೇವಾರಿಯಿಂದ ಬರುವ ಆದಾಯ, ಭಾರತೀಯ ಮದ್ಯ ತಯಾರಿಕಾ ಮೇಲಿನ ಅಬಕಾರಿ ಸುಂಕ, ಹೆಚ್ಚುವರಿ ಅಬಕಾರಿ ಸುಂಕ, ಸರಾಯಿ ಅಂಗಡಿ ಬಾಡಿಗೆ, ವಿವಿಧ ರೀತಿಯ ಮದ್ಯದಂಗಡಿಗಳ ಸನ್ನದು ಶುಲ್ಕ, ಡಿಸ್ಟಲರಿ ಹಾಗೂ ಬ್ರಿವರಿ ಸನ್ನದು ಶುಲ್ಕ, ಹಳೆಬಾಕಿ ವಸೂಲಾತಿ, ದಂಡ ಮತ್ತು ಮುಟ್ಟುಗೋಲು ಹಾಗೂ ಇತರೆ ಮೂಲಗಳಿಂದ ಆದಾಯವನ್ನು ಸಂಗ್ರಹಿಸಲಾಗುತ್ತಿದ್ದು, ಇದರ ಒಟ್ಟು ಮೊತ್ತ ಜಿಲ್ಲೆಯಲ್ಲಿ ತಿಂಗಳಿಗೆ ೫.೫೦ ಕೋಟಿ ರೂ.ಗಳಾಗಿರುತ್ತದೆ. ಕರ್ನಾಟಕ ಅಬಕಾರಿ (ಮದ್ಯವನ್ನು ಚಿಲ್ಲರೆಯಾಗಿ ಮಾರಾಟ ಮಾಡುವ ಹಕ್ಕಿನ ಗುತ್ತಿಗೆ) ನಿಯಮಾವಳಿ ೧೯೬೯, ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು ೧೯೬೭, ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶೀಯ ಮದ್ಯ ಮಾರಾಟ) ನಿಯಮಗಳು ೧೯೬೮, ದಿ ಮೆಡಿಸಿನಲ್ ಮತ್ತು ಟಾಯ್ಲೆಟ್ ಪ್ರಿಪರೇಶನ್ಸ್ (ಎಕ್ಸೈಸ್ ಡ್ಯೂಟಿ ರೂಲ್ಸ್) ೧೯೫೬.

## ಅರಣ್ಯ ಇಲಾಖೆ

ಅರಣ್ಯೀಕರಣದ ಕಾಮಗಾರಿ, ಅರಣ್ಯ ಸಂರಕ್ಷಣೆ ಅರಣ್ಯೋತ್ಪನ್ನಗಳ ಹರಾಜು, ಅರಣ್ಯೋತ್ಪನ್ನಗಳ ಕಳ್ಳ ಸಾಗಾಣಿಕೆಯಲ್ಲಿ ನಿಯಂತ್ರಣ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನಗಳ ಹರಾಜು ಮತ್ತಿತರ ಧ್ಯೇಯೋದ್ದೇಶಗಳನ್ನು ಇಲಾಖೆಯು ಅರಣ್ಯಭೂಮಿ ಸಾಲ ಸಂರಕ್ಷಣೆ, ನಶಿಸಿಹೋದ ಅರಣ್ಯ ಭಾಗದಲ್ಲಿ ನೆಡುತೋಪು ಬೆಳೆಸುವುದು, ಬೆಂಕಿಯಿಂದ ಅರಣ್ಯ ರಕ್ಷಣೆ, ನಗರ ಹಸಿರೀಕರಣ ಮೊದಲಾದ ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸುತ್ತಿದೆ. ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ ಕುಂದಾಪುರ ವಿಭಾಗ, ಕುಂದಾಪುರ, ಉಡುಪಿ ಜಿಲ್ಲೆ ಇದು ಏಪ್ರಿಲ್, ೧೯೬೧ರಲ್ಲಿ ಆರಂಭಗೊಂಡಿತು. ಉಪ ಅರಣ್ಯ ಸಂರಕ್ಷಣಾಧಿಕಾರಿ ಕಛೇರಿಯ ಮುಖ್ಯಸ್ಥರಾಗಿದ್ದು, ಸಂಪೂರ್ಣ ಉಡುಪಿ ಜಿಲ್ಲೆ ಹಾಗೂ ಭಾಗಶಃ ದಕ್ಷಿಣ ಕನ್ನಡ ಜಿಲ್ಲಾ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಇವರಿಗೆ ಕಛೇರಿ ಕೆಲಸಲ್ಲಿ ನೆರವಾಗಲು ಒಬ್ಬ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಒಬ್ಬ ವ್ಯವಸ್ಥಾಪಕರು, ಒಬ್ಬ ಅಧೀಕ್ಷಕರು, ನಾಲ್ಕು ಮಂದಿ ಪ್ರಥಮ ದರ್ಜೆ ಸಹಾಯಕರು, ಇಬ್ಬರು ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಅಧಿಕಾರಿ ಸಿಬ್ಬಂದಿಗಳಿದ್ದಾರೆ. ಅರಣ್ಯ ಕಾಯ್ದೆ ಮತ್ತು ನಿಯಮಗಳು, ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ, ಅರಣ್ಯ ಸಂರಕ್ಷಣಾ ಕಾಯ್ದೆ, ಕರ್ನಾಟಕ ಅರಣ್ಯ ಸಂಹಿತೆ, ಕರ್ನಾಟಕ ಅರಣ್ಯ ಲೆಕ್ಕ ಸಂಹಿತೆ, ವನ್ಯಜೀವಿ ಸಂರಕ್ಷಣಾ ಕಾಯ್ದೆ, ಕರ್ನಾಟಕ ನಾಗರೀಕ ಸೇವಾ ನಿಯಮಗಳು ಮತ್ತಿತರ ನಿಯಮ, ಅಧಿನಿಯಮಗಳನ್ನು ಕಛೇರಿ ಕೆಲಸ ಕಾರ್ಯಗಳ ನಿರ್ವಹಣೆಯಲ್ಲಿ ಅನುಸರಿಸುತ್ತಾರೆ.

ಈ ಕಛೇರಿಯ ಅಧೀನದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಉಪವಿಭಾಗ, ಮೂಡಬಿದ್ರೆಯಲ್ಲಿದ್ದು, ಹೆಬ್ರಿ, ಕಾರ್ಕಳ, ಮೂಡಬಿದ್ರೆ ಮತ್ತು ವೇಣೂರು ವಲಯಗಳು ಇವರ ವ್ಯಾಪ್ತಿಗೆ ಬರುತ್ತವೆ. ಮತ್ತೊಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಉಡುಪಿ

ಈ ಕಛೇರಿಯ ಅಧೀನದಲ್ಲಿ ವಿಭಾಗದ ಎಲ್ಲಾ ವಲಯಗಳು ಬರುತ್ತವೆ. ಅಲ್ಲದೆ ಬೈಂದೂರು, ಕುಂದಾಪುರ, ಶಂಕರನಾರಾಯಣ, ಹೆಬ್ರಿ, ಕಾರ್ಕಳ, ಮೂಡಬಿದ್ರೆ, ವೇಣೂರು ಹಾಗೂ ಉಡುಪಿಗಳಲ್ಲಿ ವಲಯ ಅರಣ್ಯ ಅಧಿಕಾರಿಗಳ ಕಛೇರಿಗಳಿವೆ. ವಲಯ ಅರಣ್ಯ ಅಧಿಕಾರಿಗಳು ಆಯಾ ವಲಯಗಳ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ

ಉಡುಪಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯು ಜೂನ್, ೧೯೯೯ರಲ್ಲಿ ಆರಂಭವಾಗಿದ್ದು, ಬೆಂಗಳೂರಿನಲ್ಲಿರುವ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಕಛೇರಿಗಳಿಂದ ಅಂಕಿ ಅಂಶಗಳ ಮಾಹಿತಿ ಸಂಗ್ರಹಣೆ ಹಾಗೂ ಪ್ರಕಟಣೆ ಮಾಡುವುದು ಈ ಕಛೇರಿಯ ಧ್ಯೇಯೋದ್ದೇಶವಾಗಿದೆ. ಅಲ್ಲದೆ ರಾಜ್ಯ ಹಾಗೂ ಕೇಂದ್ರ ಸರ್ಕಾರದವರು ಕಾಲಕಾಲಕ್ಕೆ ವಹಿಸುವ ಕೃಷಿ, ಆರ್ಥಿಕ, ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ, ರಾಷ್ಟ್ರೀಯ ಮಾದರಿ ಸಮೀಕ್ಷೆ, ಬೆಲೆ ವರದಿ, ಸುಗ್ಗಿ ಕಾಲದ ಧಾರಣೆ ವರದಿ, ಜನನ ಮರಣ ನೋಂದಣಿ ವಿಶೇಷ ಮಾಸಿಕ ವರದಿ, ಲಿಂಗಾನುಪಾತ ವರದಿ, ವಾರದ ಮಳೆ ಬೆಳೆ ವರದಿ, ಹಣ್ಣು ಮತ್ತು ತರಕಾರಿ ಸಮೀಕ್ಷೆಗಳನ್ನು ಸಿದ್ಧಪಡಿಸುವುದು ಮೊದಲಾದ ಕಾರ್ಯಗಳನ್ನು ಈ ಕಛೇರಿಯು ನಿರ್ವಹಿಸುತ್ತದೆ. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರ ನೆರವಿಗಾಗಿ ಸಹಾಯ ನಿರ್ದೇಶಕ, ಸಹಾಯಕ ಸಾಂಖ್ಯಿಕ ಅಧಿಕಾರಿ, ಅಧೀಕ್ಷಕ ಮತ್ತಿತರ ಅಧಿಕಾರಿ, ಸಿಬ್ಬಂದಿಗಳು ಇರುತ್ತಾರೆ. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಬೆಂಗಳೂರು ಅವರು ಮೇಲಧಿಕಾರಿಗಳಾಗಿದ್ದಾರೆ.

## ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ

ಸಾರ್ವಜನಿಕ ವಿತರಣಾ ಪದ್ಧತಿಯಡಿ ನ್ಯಾಯಬೆಲೆ ಅಂಗಡಿಗಳ ಮೂಲಕ ಜಿಲ್ಲೆಯ ಅರ್ಹ ನಾಗರೀಕರಿಗೆ ದಿನನಿತ್ಯದ ಅಗತ್ಯ ವಸ್ತುಗಳನ್ನು ಪೂರೈಸುವ ಉದ್ದೇಶದಿಂದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪನಿರ್ದೇಶಕರ ಕಛೇರಿಯು ಉಡುಪಿಯಲ್ಲಿ ಆಗಸ್ಟ್ ೧೯೮೭ ರಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯ ಎಲ್ಲಾ ತಾಲೂಕುಗಳ ತಹಶೀಲ್ದಾರರು ಆಯಾ ತಾಲೂಕು ಹಂತದಲ್ಲಿ ಇಲಾಖಾ ಕಾರ್ಯಗಳನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳಾಗಿರುತ್ತಾರೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ (B.P.L) ಹಳದಿ ಚೀಟಿಗಳು ಮತ್ತು ಅಂತ್ಯೋದಯ ಅನ್ನ ಯೋಜನಾ ಚೀಟಿಗಳನ್ನು ನೀಡಿ ರಿಯಾಯಿತಿ ದರದಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಆಹಾರ ಧಾನ್ಯ ಹಾಗೂ ಸೀಮೆಎಣ್ಣೆ ವಿತರಿಸುವುದು, ಆಹಾರಧಾನ್ಯ ಮತ್ತು ಸೀಮೆಎಣ್ಣೆಯನ್ನು ತಾಲೂಕುವಾರು ಮರು ಹಂಚಿಕೆ ಮಾಡುವುದು ಮೊದಲಾದ ಚಟುವಟಿಕೆಗಳಲ್ಲಿ ತೊಡಗಿದೆ. ಉಪನಿರ್ದೇಶಕರಿಗೆ ವ್ಯವಸ್ಥಾಪಕರು, ಲೆಕ್ಕಾಧೀಕ್ಷಕರು, ಪ್ರಥಮ ದರ್ಜೆ ಲೆಕ್ಕ ಸಹಾಯಕರು, ಪ್ರಥಮ ದರ್ಜೆ ಸಹಾಯಕರು ಮತ್ತಿತರರು ನೆರವು ನೀಡುತ್ತಿದ್ದಾರೆ. ಪಿ.ಡಿ.ಎಸ್. (P.D.S) ಕಂಟ್ರೋಲ್ ಆರ್ಡರ್ ೧೯೯೨, ಗ್ಯಾಸ್ ಕಂಟ್ರೋಲ್ ಆರ್ಡರ್ ೨೦೦೦, ಎಡಿಬಲ್ ಆಯಿಲ್ ಪ್ಯಾಕೇಜಿಂಗ್ ಆರ್ಡರ್ ೧೯೯೮, ಕರ್ನಾಟಕ ಎಸೆನ್ಷಿಯಲ್ ಕಮಾಡಿಟಿ ಲೈಸೆನ್ಸಿಂಗ್ ಆ್ಯಕ್ಟ್ ೧೯೫೫, ಮೋಟಾರು ಸ್ಪಿರಿಟ್ ಅಂಡ್ ಹೈಸ್ಪೀಡ್ ಡೀಸೆಲ್ ರೆಗ್ಯುಲೇಷನ್ ಆಫ್ ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್ ಅಂಡ್ ಪ್ರಿವೆನ್ಷನ್ ಆಫ್ ಮಾಲ್ ಪ್ರಾಕ್ಟೀಸ್ ಆರ್ಡರ್ ೨೦೦೨ ಮೊದಲಾದ ನಿಗದಿತ ನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ಆಯುಕ್ತರು, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ

ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಾಸ್ಟರ್ ಪ್ಲಾನ್ ತಯಾರಿಸಿ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದ್ದು, ಮಾಸ್ಟರ್ ಪ್ಲಾನ್ ಹಾಗೂ ಅದಕ್ಕೆ ಸಂಬಂಧಿಸಿದ

ವಲಯ ನಿಯಮಾವಳಿಗೆ ಅನುಗುಣವಾಗಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಖಾಸಗಿ ಜಮೀನುಗಳಿಗೆ ವಿನ್ಯಾಸ ಅನುಮೋದನೆ ನೀಡುವುದು, ಕಟ್ಟಡ ಪ್ರಾರಂಭಿಕ ಪ್ರಮಾಣ ಪತ್ರ ನೀಡುವುದು ಹಾಗೂ ಇನ್ನಿತರೆ ಅಭಿವೃದ್ಧಿಗಳಿಗೆ ನಿರಾಕ್ಷೇಪಣಾ ಪತ್ರಗಳನ್ನು ನೀಡುವ ಉದ್ದೇಶಗಳೊಂದಿಗೆ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ: ೧-೭-೧೯೯೮ ರಿಂದ ಕಾರ್ಯ ನಿರ್ವಹಿಸುತ್ತಿದೆ. ಈ ಕಛೇರಿಯ ಮುಖ್ಯಸ್ಥರು ಆಯುಕ್ತರಾಗಿದ್ದಾರೆ. ಅದಕ್ಕೂ ಮೊದಲು ದಿನಾಂಕ: ೧-೭-೧೯೭೬ ರಿಂದ ದಿನಾಂಕ:೨೪-೪-೧೯೯೮ರ ವರೆಗೂ ಈ ಹುದ್ದೆ ಸದಸ್ಯ ಕಾರ್ಯದರ್ಶಿ ಎಂದಾಗಿತ್ತು. ಇವರಿಗೆ ಸಹಾಯಕ ಅಭಿಯಂತರರು, ಮತ್ತಿತರ ಅಧಿಕಾರಿ ಸಿಬ್ಬಂದಿಗಳು ಕಛೇರಿಗೆ ಕೆಲಸದಲ್ಲಿ ನೆರವಾಗಿದ್ದಾರೆ. ಅಲ್ಲದೆ ಅಧಿಕಾರೇತರರಾಗಿ ಅಧ್ಯಕ್ಷರು, ನಾಮ ನಿರ್ದೇಶಿತ ಸ್ಥಳೀಯ ಸದಸ್ಯರು ಇರುತ್ತಾರೆ. ನಗರ ಯೋಜನಾ ಇಲಾಖೆಯ ಸಹಾಯಕ ನಿರ್ದೇಶಕರು, ನಗರ ಯೋಜನಾ ಸದಸ್ಯರಾಗಿದ್ದು, ತಾಂತ್ರಿಕ ವಿಷಯಗಳಿಗೆ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆ ಸಲಹೆ ನೀಡುವರು. ಪ್ರಾಧಿಕಾರದಲ್ಲಿ ಅಧಿಕಾರಿಗಳು ಹಾಗೂ ಅಧಿಕಾರೇತರರು ಸೇರಿದಂತೆ ೧೭ ಸದಸ್ಯರಿರುತ್ತಾರೆ. ನಗರಾಭಿವೃದ್ಧಿ ಪ್ರಾಧಿಕಾರವು ೧೯ ಗ್ರಾಮಗಳನ್ನೊಳಗೊಂಡಿದ್ದು, ೧೨೭.೩೫ ಚ.ಕಿ.ಮೀ ವ್ಯಾಪ್ತಿಯನ್ನು ಹೊಂದಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ (K.T.C.P) ೧೯೬೧, ನಗರಾಭಿವೃದ್ಧಿ ಕಾಯ್ದೆ ೧೯೮೭ ಮತ್ತಿತರ ನಿಯಮ ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯಗಳಲ್ಲಿ ಅನುಸರಿಸುತ್ತದೆ. ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಕೇಂದ್ರ ಕಛೇರಿ ಬೆಂಗಳೂರು ಅವರು ಮೇಲಧಿಕಾರಿಗಳಾಗಿರುತ್ತಾರೆ.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಕನ್ನಡ ಸಂಸ್ಕೃತಿಯ ಸಂರಕ್ಷಣೆ ಹಾಗೂ ಅಭಿವೃದ್ಧಿಯನ್ನು ಮುಖ್ಯ ಧ್ಯೇಯೋದ್ದೇಶವಾಗಿ ಹೊಂದಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಿಲ್ಲಾ ಕಛೇರಿಯು ಉಡುಪಿಯಲ್ಲಿದ್ದು, ಸಹಾಯಕ ನಿರ್ದೇಶಕರು ಇದರ ಮುಖ್ಯಸ್ಥರಾಗಿರುತ್ತಾರೆ. ದ್ವಿತೀಯ ದರ್ಜೆ ಸಹಾಯಕ, ಬೆರಳಚ್ಚುಗಾರರು ಹಾಗೂ ದಲಾಯಿತ ಈ ಕಛೇರಿಯಲ್ಲಿನ ಇತರ ಸಿಬ್ಬಂದಿಯಾಗಿದ್ದಾರೆ. ಉಡುಪಿ ಜಿಲ್ಲಾ ಕಾರ್ಯ ವ್ಯಾಪ್ತಿ ಹೊಂದಿರುವ ಸಹಾಯಕ ನಿರ್ದೇಶಕರ ಕಛೇರಿಯು ಕಾಲಕಾಲಕ್ಕೆ ಹಮ್ಮಿಕೊಳ್ಳುವ ಸರ್ಕಾರದ ಸಿಬ್ಬಂದಿಗೆ ಆಡಳಿತ ಕನ್ನಡ ಕಾರ್ಯಶಿಬಿರ, ಚಿಗುರು, ಸಾಂಸ್ಕೃತಿಕ ಸೌರಭ, ಕಾವ್ಯಕಾವೇರಿ, ಸಂಧ್ಯಾರಾಗ, ಉದ್ಯಾನವನದಲ್ಲಿ ಉದಯರಾಗ ಮೊದಲಾದ ಕಾರ್ಯಕ್ರಮಗಳಲ್ಲದೆ, ಸಾಂಸ್ಕೃತಿಕ ಜಿಲ್ಲಾ ಉತ್ಸವ, ಗಡಿನಾಡ ಉತ್ಸವ, ಬಯಲು ರಂಗಮಂದಿರಗಳ ನಿರ್ಮಾಣಕ್ಕೆ ಧನಸಹಾಯ, ಸಾಹಿತಿಗಳಿಗೆ, ಕಲಾವಿದರಿಗೆ, ಮಾಸಾಶನ ಮತ್ತಿತರ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಕೇಂದ್ರ ಕಛೇರಿಗೆ ನೆರವಾಗುತ್ತದೆ. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಕರ್ನಾಟಕ ಸರಕಾರಿ ವಿಮಾ ಇಲಾಖೆ

ಕರ್ನಾಟಕ ರಾಜ್ಯದ ಅರ್ಹ ಸರ್ಕಾರಿ ನೌಕರರಿಗೆ ಕಡ್ಡಾಯ ಜೀವವಿಮೆ, ವಿಮಾದಾರರಿಗೆ ಸಾಲ ಮಂಜೂರಾತಿ, ಸಕಾಲದಲ್ಲಿ ಹಕ್ಕು ಪ್ರಕರಣಗಳ ಇತ್ಯರ್ಥ ಸರ್ಕಾರಿ ವಾಹನಗಳಿಗೆ ವಿಮೆ, ವಿಮಾ ನವೀಕರಣ ಅಪಘಾತದ ಸಂದರ್ಭಗಳಲ್ಲಿ ವಿಮೆ ಮೊಬಲಗು ಇತ್ಯರ್ಥ, ನಿಗಮ, ಮಂಡಳಿ, ಕಾರ್ಪೋರೇಷನ್, ಅನುದಾನಿತ ಶಾಲೆ ಹಾಗೂ ಪುರಸಭೆಯ ನೌಕರರ ಕುಟುಂಬ ಕಲ್ಯಾಣ ನಿಧಿ ಪ್ರಕರಣ ಇತ್ಯರ್ಥದಲ್ಲಿ ಮೇಲ್ವಿಚಾರಣೆ ಹಾಗೂ ಆಡಳಿತಾತ್ಮಕ ನಿರ್ವಹಣೆ ಮಾಡುವ ಧ್ಯೇಯೋದ್ದೇಶಗಳಿಂದ ಜಿಲ್ಲಾ ವಿಮಾ ಅಧಿಕಾರಿ ಕಛೇರಿಯು ಮಂಗಳೂರಿನಲ್ಲಿ ೧೯೭೬ ರಿಂದ ಕಾರ್ಯನಿರ್ವಹಿಸುತ್ತಿತ್ತು. ಆದರೆ ಉಡುಪಿ ಜಿಲ್ಲೆಯು ೧೯೯೭-೯೮ ರಿಂದ ಪ್ರತ್ಯೇಕ ಜಿಲ್ಲೆಯಾಗಿ ರಚನೆಯಾದ ನಂತರ ಜೂನ್ ಒಂದು ೨೦೦೦ನೇ ಇಸವಿಯಿಂದ ಈ ಕಛೇರಿಯು ಉಡುಪಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಈ ಕಛೇರಿಯ ವ್ಯಾಪ್ತಿಗೆ ಜಿಲ್ಲೆಯ ಉಡುಪಿ, ಕುಂದಾಪುರ ಹಾಗೂ ಕಾರ್ಕಳ ತಾಲೂಕುಗಳು ಒಳಪಡುತ್ತವೆ.

ಈ ಕಛೇರಿಯಲ್ಲಿ ಜಿಲ್ಲಾ ವಿಮಾಧಿಕಾರಿ, ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗವಿದೆ. ಇನ್‌ಶೂರೆನ್ಸ್ ಆ್ಯಕ್ಟ್ ೧೯೩೮, ಇನ್‌ಶೂರೆನ್ಸ್ ರೆಗ್ಯುಲೇಟರಿ ಡೆವಲಪ್‌ಮೆಂಟ್ ಅಥಾರಿಟಿ ಆ್ಯಕ್ಟ್ ೨೦೦೦, ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವ ವಿಮೆ) ನಿಯಮಗಳು ೧೯೫೮, ಮೋಟಾರು ವಾಹನಗಳ ಕಾಯಿದೆ ೧೯೮೮ ಅಂಡ್ ವಿತ್ ಅಲೈಡ್‌ರೂಲ್ಸ್, ದಿ ವರ್ಕ್‌ಮನ್ ಕಾಂಪೆನ್ಸೇಶನ್ ಆ್ಯಕ್ಟ್ ೧೯೨೩, ಕರ್ನಾಟಕ ಸರ್ಕಾರಿ ವಿಮಾ ಇಲಾಖಾ (ವಾಹನ ಶಾಖೆ) ನಿಯಮಗಳು ೧೯೫೮, ಕರ್ನಾಟಕ ಸರ್ಕಾರ ಕುಟುಂಬ ಕಲ್ಯಾಣ ನಿಧಿ ನಿಯಮಗಳು ೧೯೭೫, ಕರ್ನಾಟಕ ಸರ್ಕಾರ ಕುಟುಂಬ ಕಲ್ಯಾಣ ನಿಧಿ (ಪೌರ ನೌಕರರ) ನಿಯಮಗಳು ೧೯೭೭, ಕರ್ನಾಟಕ ಸರ್ಕಾರ ಕುಟುಂಬ ಕಲ್ಯಾಣ ನಿಧಿ (ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ನೌಕರರ) ನಿಯಮಗಳು ೧೯೮೧ ಮೊದಲಾದ ನಿಯಮ ಅಧಿನಿಯಮಗಳನ್ನು ಈ ಕಛೇರಿಯು ಅನುಸರಿಸುತ್ತಿದೆ. ಉಪ ನಿರ್ದೇಶಕರು, ಕರ್ನಾಟಕ ಸರಕಾರಿ ವಿಮಾ ಇಲಾಖೆ, ಬೆಂಗಳೂರು ಅವರು ತತ್‌ಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

### ಕರಾವಳಿ ಕಾವಲು ಪೊಲೀಸ್

ಕರ್ನಾಟಕ ಕರಾವಳಿ ತೀರದಲ್ಲಿ ಭೂಗತ ಹಾಗೂ ವಿಧ್ವಂಸಕಾರಿ ಕೃತ್ಯಗಳ ಬಗ್ಗೆ ಮಾಹಿತಿ ಸಂಗ್ರಹಿಸುವ ಉದ್ದೇಶದಿಂದ ಏಪ್ರಿಲ್ ೧೯೯೯ರಲ್ಲಿ ಈ ಕಛೇರಿಯು ಪೊಲೀಸ್ ಇಲಾಖೆಯಡಿಯಲ್ಲಿ ಆರಂಭಗೊಂಡಿತು. ಕರ್ನಾಟಕ ಕರಾವಳಿ ಪ್ರದೇಶ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಪೊಲೀಸ್ ಮಹಾನಿರೀಕ್ಷಕರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಇಬ್ಬರು ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಆರು ಮಂದಿ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ೩೧ ಪೊಲೀಸ್ ಇನ್ಸ್‌ಪೆಕ್ಟರ್‌ಗಳು, ೨೦ ಸಿ.ಹೆಚ್.ಸಿ, ೫೦ ಸಿ.ಪಿ.ಸಿ, ಎರಡು ಪಿ.ಐ (ನಿ) ನಾಲ್ಕು ಪಿ.ಎಸ್.ಐ (ನಿ), ೧೦ ಹೆಚ್.ಸಿ (ನಿ), ೧೨ ಪಿ.ಸಿ (ನಿ) ಮತ್ತಿತರ ಅಧಿಕಾರಿ ಸಿಬ್ಬಂದಿಗಳು ಅವರಿಗೆ ಕಛೇರಿ ಕೆಲಸದಲ್ಲಿ ನೆರವಾಗುತ್ತಿದ್ದಾರೆ.

ಕರ್ನಾಟಕ ಕರಾವಳಿ ಪ್ರದೇಶದಲ್ಲಿ ಒಟ್ಟು ಐದು ಪೊಲೀಸ್ ಠಾಣೆಗಳು, ಮಂಗಳೂರು, ಕುಂದಾಪುರ, ಭಟ್ಕಳ, ಕುಮಟ ಹಾಗೂ ಕಾರವಾರಗಳಲ್ಲಿದ್ದು, ಕೇಂದ್ರ ಸರ್ಕಾರದ ಕೋಸ್ಟಲ್ ಸೆಕ್ಯೂರಿಟಿ ಯೋಜನೆಯಡಿಯಲ್ಲಿ ಇದನ್ನು ಅನುಷ್ಠಾನಗೊಳಿಸಿದೆ. ಕರಾವಳಿ ಕಾವಲು ಪೊಲೀಸ್ ಕಛೇರಿಯ ಅಧೀನದಲ್ಲಿ ಪೊಲೀಸ್ ಅಧೀಕ್ಷಕರ ಕಛೇರಿ, ಕರಾವಳಿ ಕಾವಲು ಪೊಲೀಸ್, ಭಟ್ಕಳ ಪೊಲೀಸ್ ಉಪಾಧೀಕ್ಷಕರ ಕಛೇರಿ ಕರಾವಳಿ ಕಾವಲು ಪೊಲೀಸ್ ಮಂಗಳೂರು, ಪೊಲೀಸ್ ಉಪಕಛೇರಿ ಕರಾವಳಿ ಕಾವಲು ಪೊಲೀಸ್ ಕುಮಟ, ಪೊಲೀಸ್ ಉಪಕಛೇರಿ, ಕರಾವಳಿ ಕಾವಲು ಪೊಲೀಸ್ ಕಾರವಾರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಕಛೇರಿಯು ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಪೊಲೀಸ್ ಮ್ಯಾನುವೆಲ್ ಮೊದಲಾದ ನಿಯಮಗಳನ್ನು ತನ್ನ ನಿತ್ಯ ಕೆಲಸ ಕಾರ್ಯಗಳಲ್ಲಿ ಪಾಲಿಸುತ್ತದೆ. ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರು ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ.

### ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆ

ವಿಭಜನೆಗೆ ಪೂರ್ವದಲ್ಲಿ ಉಡುಪಿ ಜಿಲ್ಲೆಯ ಕಾರ್ಖಾನೆಗಳ ಪರಿವೀಕ್ಷಣೆಗೆ ಸಂಬಂಧಿಸಿದಂತೆ ವಿಭಾಗೀಯ ಕಛೇರಿಯು ಮಂಗಳೂರಿನಲ್ಲಿ ಮಂಗಳೂರು–೨ ಎಂದು ಕಾರ್ಯನಿರ್ವಹಿಸುತ್ತಿತ್ತು. ಆದರೆ ವಿಭಜನೆ ನಂತರ ಉಡುಪಿ ಜಿಲ್ಲೆಯಲ್ಲಿ ಇರುವ ಕಾರ್ಖಾನೆಗಳ ಪರಿವೀಕ್ಷಣಾ ಕಾರ್ಯ ಸುಗಮವಾಗಿ ಸಾಗುವ ದಿಸೆಯಲ್ಲಿ ಉಡುಪಿಯಲ್ಲಿ ಈ ಕಛೇರಿಯನ್ನು ದಿನಾಂಕ: ೨–೮–೧೯೯೯ರಲ್ಲಿ ಸ್ಥಾಪಿಸಲಾಯಿತು. ಈ ಕಛೇರಿಯು ಉಡುಪಿ ಕಂದಾಯ ಜಿಲ್ಲೆಯ ವ್ಯಾಪ್ತಿಯನ್ನು ಹೊಂದಿತ್ತು. ಆದರೆ ಸರ್ಕಾರದ ಆದೇಶ ಸಂ.ಕಾಇ–೫೧:ಕಾಬಾಸೆ ೨೦೦೪ ದಿನಾಂಕ: ೧೭–೦೯–೨೦೦೪ರಲ್ಲಿ ಇಲಾಖೆಯಲ್ಲಿನ ಕಛೇರಿಗಳನ್ನು ಸಮಗ್ರವಾಗಿ ಪುನರ್ ಸಂಘಟಿಸುವ ಪರಿಣಾಮವಾಗಿ ಉಡುಪಿ ವಿಭಾಗವನ್ನು ಮತ್ತೇ ಮಂಗಳೂರು ವಿಭಾಗ–೩ಕ್ಕೆ ಸೇರಿಸಲಾಗಿದೆ. ಹಿರಿಯ ಸಹಾಯಕ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ.

ಈ ಕಛೇರಿಯು ಉಡುಪಿ ಹಾಗೂ ಮಂಗಳೂರು ಜಿಲ್ಲೆಗಳ ಸೀಮಿತ ಭಾಗದ ಮೇಲೆ ತನ್ನ ವ್ಯಾಪ್ತಿಯನ್ನು ಹೊಂದಿರುತ್ತದೆ. ಸದರಿ ಕಾರ್ಖಾನೆಗಳಲ್ಲಿ ಕಾಯ್ದೆ ೧೯೪೮, ಪ್ರಸೂತಿ ಸೌಲಭ್ಯ ಕಾಯ್ದೆ ೧೯೬೧, ವೇತನ ಸಂದಾಯ ಕಾಯ್ದೆ ೧೯೩೬, ಬಾಲಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ೧೯೮೬, ಪರಿಸರ ಸಂರಕ್ಷಣೆ ಕಾಯ್ದೆ ೧೯೮೬, ಮತ್ತಿತರ ಕಾಯಿದೆಗಳನ್ನು ವ್ಯಾಪ್ತಿ ಪ್ರದೇಶದಲ್ಲಿರುವ ಕಾರ್ಖಾನೆಗಳಲ್ಲಿ ಅನುಷ್ಠಾನಗೊಳಿಸುತ್ತಿದೆ. ಈ ಕಛೇರಿಯ ವ್ಯಾಪ್ತಿಯಲ್ಲಿ ಒಟ್ಟು ೩೮೧ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ಒಂಭತ್ತು ಅಪಾಯಕಾರಿ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಪರಿಣಾಮವಾಗಿ ಕಾರ್ಖಾನೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಕಾರ್ಮಿಕರಿಗೆ ಹೆಚ್ಚಿನ ರೀತಿಯಲ್ಲಿ ಸುರಕ್ಷತಾ ದೃಷ್ಟಿಯಿಂದ ಕಾರ್ಯನಿರ್ವಹಣೆ ಮಾಡಲು ತರಬೇತಿ ನೀಡಲಾಗುತ್ತಿದೆ.

**ಕಾರ್ಮಿಕ ಇಲಾಖೆ**

ಮಂಗಳೂರು ವಿಭಾಗದ ಕಾರ್ಮಿಕ ಆಯುಕ್ತರ ಕಛೇರಿಯು ಮಂಗಳೂರಿನಲ್ಲಿ ೧೯೬೫ ರಿಂದ ಕಾರ್ಯನಿರ್ವಹಿಸುತ್ತಿದೆ. ಸಹಾಯಕ ಕಾರ್ಮಿಕ ಆಯುಕ್ತರ ಆಡಳಿತ ವ್ಯಾಪ್ತಿಗೆ ಉಡುಪಿ, ದಕ್ಷಿಣ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳು ಸೇರಿವೆ. ಕಛೇರಿ ಸಹಾಯಕ್ಕೆ ಪ್ರಥಮ ದರ್ಜೆ ಸಹಾಯಕ ಮೊದಲಾದ ಸಿಬ್ಬಂದಿ ಇವರ ನೆರವಿಗಿದ್ದಾರೆ. ಉಡುಪಿ, ದಕ್ಷಿಣ ಕನ್ನಡ ಹಾಗೂ ಶಿವಮೊಗ್ಗಗಳಲ್ಲಿನ ಕಾರ್ಮಿಕ ಅಧಿಕಾರಿಗಳು ಆಯಾ ಜಿಲ್ಲೆಗಳ ಉಸ್ತುವಾರಿ ನೋಡಿಕೊಳ್ಳುತ್ತಾರೆ. ಬೀಡಿ ಮತ್ತು ಸಿಗಾರ್ ಕಾರ್ಮಿಕರು, ಬಾಲ ಕಾರ್ಮಿಕರು, ಗುತ್ತಿಗೆ ಕಾರ್ಮಿಕರು, ಕೈಗಾರಿಕಾ ವಿವಾದ, ಕಾರ್ಮಿಕ ಕಲ್ಯಾಣ ನಿಧಿ, ಹೆರಿಗೆ ಭತ್ಯೆ, ಬೋನಸ್ ಪಾವತಿ ಮೊದಲಾವುಗಳಿಗೆ ಸಂಬಂಧಿಸಿದ ಕಾಯಿದೆ ಮತ್ತು ನಿಯಮಗಳನ್ನು ಈ ಕಛೇರಿಯು ತನ್ನ ಆಡಳಿತ ಕಾರ್ಯಗಳಲ್ಲಿ ಪಾಲಿಸುತ್ತದೆ. ಉಪ ಕಾರ್ಮಿಕ ಆಯುಕ್ತರು, ಹಾಸನ ಪ್ರಾದೇಶಿಕ ಕಛೇರಿ, ಹಾಸನ ಹಾಗೂ ಕಾರ್ಮಿಕ ಆಯುಕ್ತರು, ಕಾರ್ಮಿಕ ಆಯುಕ್ತರ ಕಛೇರಿ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

**ಕೃಷಿ ಇಲಾಖೆ**

ರೈತರಿಗೆ ಅನುಕೂಲವಾಗುವಂತೆ ಕಡಿಮೆ ಬಂಡವಾಳದಿಂದ ಹೆಚ್ಚಿನ ಉತ್ಪಾದನೆ ಪಡೆಯಲು ಕೃಷಿ ಇಲಾಖೆಯಿಂದ ನಿರ್ದೇಶಿಸಿರುವ ಯೋಜನೆಗಳನ್ನು ಅನುಷ್ಠಾನಗೊಳಿಸುವುದು, ಪ್ರಾತ್ಯಕ್ಷತೆಗಳ ಮೂಲಕ ಮಾರ್ಗದರ್ಶನ ನೀಡುವುದು, ರೈತರಿಗೆ ಸಕಾಲದಲ್ಲಿ ಉತ್ತಮ ಗುಣಮಟ್ಟದ ಬೀಜ, ರಸಗೊಬ್ಬರ, ಕೀಟನಾಶಕಗಳು ಮತ್ತು ಕೃಷಿ ಉಪಕರಣಗಳನ್ನು ಸಹಾಯಧನದಲ್ಲಿ ಒದಗಿಸುವುದು ಹಾಗೂ ಸಣ್ಣ, ಅತೀ ಸಣ್ಣ ರೈತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರು ಅಲ್ಪಸಂಖ್ಯಾತ ರೈತರು ಹಾಗೂ ರೈತ ಮಹಿಳೆಯರಿಗೆ ಸಹಾಯವಾಗುವಂತೆ ಯೋಜನೆಗಳನ್ನು ಅನುಷ್ಟಾನಗೊಳಿಸುವ ಉದ್ದೇಶಗಳೊಂದಿಗೆ ಜಿಲ್ಲೆಯಲ್ಲಿ ಈ ಇಲಾಖೆಯು ೧೯೮೮ರಲ್ಲಿ ಸ್ಥಾಪಿತಗೊಂಡಿತು. ೨೦೦೧ಕ್ಕೆ ಮೊದಲು ಈ ಕಛೇರಿಯ ಮುಖ್ಯಸ್ಥರ ಹುದ್ದೆ ಉಪ ಕೃಷಿ ನಿರ್ದೇಶಕರು ಎಂದಿತ್ತು. ೨೦೦೧ರಲ್ಲಿ ಈ ಹುದ್ದೆ ಜಂಟಿ ಕೃಷಿ ನಿರ್ದೇಶಕರು ಎಂದು ಉನ್ನತೀಕರಣಗೊಂಡಿತು. ಜಂಟಿ ಕೃಷಿ ನಿರ್ದೇಶಕರಿಗೆ ಕಛೇರಿಯ ಕೆಲಸ ಕಾರ್ಯಗಳಲ್ಲಿ ನೆರವಾಗಲು ಸಹಾಯಕ ಕೃಷಿ ನಿರ್ದೇಶಕರು (ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರು (ವಿತ), ಆಡಳಿತ ಅಧಿಕಾರಿ, ಕೃಷಿ ಅಧಿಕಾರಿ, ತಾಂತ್ರಿಕ ಸಹಾಯಕರು, ಕೃಷಿ ಅಧಿಕಾರಿ (FT ಮತ್ತು FM), ಕೃಷಿ ಅಧಿಕಾರಿ (ಪರಿಕರ), ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಅಧಿಕಾರಿ ಸಿಬ್ಬಂದಿಗಳಿದ್ದಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು (K.C.S.R'S), ಕರ್ನಾಟಕ ಆರ್ಥಿಕ ಸಂಹಿತೆ, ಆಯವ್ಯಯ ನಿಯಮಗಳು, ಸಿ.ಸಿ.ಎ. ನಿಯಮಾವಳಿ, ಕರ್ನಾಟಕ ಖಜಾನೆ ಆರ್ಥಿಕ ಸಂಹಿತೆ ಮುಂತಾದ ನಿಯಮ ಹಾಗೂ ಅಧಿನಿಯಮಗಳನ್ನು ತನ್ನ ಕಛೇರಿ ಕೆಲಸಗಳಲ್ಲಿ ಅನುಸರಿಸುತ್ತಿದೆ. ಸಸ್ಯ ಸಂರಕ್ಷಣಾ ಯೋಜನೆ, ರಾಷ್ಟ್ರೀಯ ದ್ವಿದಳಧಾನ್ಯ ಅಭಿವೃದ್ಧಿ ಯೋಜನೆ, ಎಣ್ಣೆಕಾಳು ಉತ್ಪಾದನಾ ಕಾರ್ಯಕ್ರಮ, ಮುಸುಕಿನ ಜೋಳ ಅಭಿವೃದ್ಧಿ ಯೋಜನೆ, ತುಂತುರು ನೀರಾವರಿ ಘಟಕ, ರೈತ ಸಂಪರ್ಕ ಕೇಂದ್ರಗಳು,

ಜಿಲ್ಲಾ ತರಬೇತಿ ಕೇಂದ್ರ, ಕೃಷಿ ವಿಸ್ತೃತ ಯೋಜನೆ, ಕೃಷಿ ಯಾಂತ್ರೀಕರಣ ಯೋಜನೆ, ಸಾವಯವ ಗೊಬ್ಬರ ಯೋಜನೆ, ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನ ಮತ್ತಿತರ ಯೋಜನೆಗಳನ್ನು ಹಾಗೂ ಅಭಿವೃದ್ಧಿ ಚಟುವಟಿಕೆಗಳನ್ನು ಇಲಾಖೆಯು ಜಾರಿಗೊಳಿಸುತ್ತಿದೆ.

ಜಂಟಿ ಕೃಷಿ ನಿರ್ದೇಶಕರು ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿದ್ದು, ಇವರ ಅಧೀನದಲ್ಲಿ ತಾಲೂಕು ಮಟ್ಟದಲ್ಲಿ ಮೂರು ಮಂದಿ ಸಹಾಯಕ ಕೃಷಿ ನಿರ್ದೇಶಕರು, ಬೀಜೋತ್ಪಾದನಾ ಕೇಂದ್ರದ ವ್ಯವಸ್ಥಾಪಕರು ಹಾಗೂ ಹೋಬಳಿ ಮಟ್ಟದ ಕೃಷಿ ಅಧಿಕಾರಿಗಳು ಬರುತ್ತಾರೆ. ಸಹಾಯಕ ಕೃಷಿ ನಿರ್ದೇಶಕರು ಉಡುಪಿ ಇವರ ಅಧೀನದಲ್ಲಿ ಹೋಬಳಿ ಮಟ್ಟದಲ್ಲಿ ಉಡುಪಿ, ಕಾಪು, ಬ್ರಹ್ಮಾವರ ಹಾಗೂ ಕೋಟಗಳಲ್ಲಿ ನಾಲ್ಕು ರೈತ ಸಂಪರ್ಕ ಕೇಂದ್ರಗಳಿದ್ದು, ಪ್ರತಿ ರೈತ ಸಂಪರ್ಕ ಕೇಂದ್ರಕ್ಕೂ ಒಬ್ಬೊಬ್ಬ ಕೃಷಿ ಅಧಿಕಾರಿಯಿರುತ್ತಾರೆ. ಸಹಾಯಕ ಕೃಷಿ ನಿರ್ದೇಶಕರು, ಕುಂದಾಪುರ ಇವರ ಅಧೀನದಲ್ಲಿ ಒಂದು ಬೀಜೋತ್ಪಾದನಾ ಕೇಂದ್ರ, ಕೋಟೇಶ್ವರದಲ್ಲಿದ್ದು, ವ್ಯವಸ್ಥಾಪಕರು ಇದರ ಮುಖ್ಯಸ್ಥರಾಗಿರುತ್ತಾರೆ. ಕೋಟೇಶ್ವರ ಕ್ಷೇತ್ರಕ್ಕೆಷ್ಟೆ ಇವರ ವ್ಯಾಪ್ತಿಗೆ ಸೀಮಿತಗೊಂಡಿದೆ. ಹೋಬಳಿ ಮಟ್ಟದಲ್ಲಿ ಕುಂದಾಪುರ, ಬೈಂದೂರು ಮತ್ತು ವಂಡ್ಸೆಗಳಲ್ಲಿ ಮೂರು ರೈತ ಸಂಪರ್ಕ ಕೇಂದ್ರಗಳಿದ್ದು, ಮೂವರು ಕೃಷಿ ಅಧಿಕಾರಿಗಳಿದ್ದಾರೆ. ಸಹಾಯಕ ಕೃಷಿ ನಿರ್ದೇಶಕರು, ಕಾರ್ಕಳ ಇವರ ಅಧೀನದಲ್ಲಿ ಒಂದು ಬೀಜೋತ್ಪಾದನಾ ಕೇಂದ್ರ, ಸಾಣೂರಿನಲ್ಲಿದ್ದು, ವ್ಯವಸ್ಥಾಪಕರು ಇದರ ಮುಖ್ಯಸ್ಥರಾಗಿರುತ್ತಾರೆ. ಸಾಣೂರು ಕ್ಷೇತ್ರ ಇವರ ವ್ಯಾಪ್ತಿಗೆ ಒಳಪಟ್ಟಿದೆ. ಅಲ್ಲದೆ ಹೋಬಳಿ ಮಟ್ಟದಲ್ಲಿ ಕಾರ್ಕಳ ಹಾಗೂ ಅಜೆಕಾರುಗಳಲ್ಲಿ ಎರಡು ರೈತ ಸಂಪರ್ಕ ಕೇಂದ್ರಗಳಿದ್ದು, ಇಬ್ಬರು ಕೃಷಿ ಅಧಿಕಾರಿಗಳಿರುತ್ತಾರೆ. ಕೃಷಿ ನಿರ್ದೇಶಕರು, ಕೃಷಿ ಆಯುಕ್ತರ ಕಾರ್ಯಾಲಯ, ಬೆಂಗಳೂರು ಅವರು ಮೇಲಧಿಕಾರಿಗಳಾಗಿದ್ದಾರೆ.

## ಕೃಷಿ ಮಾರಾಟ ಇಲಾಖೆ

ಉಡುಪಿ ಜಿಲ್ಲೆಯಲ್ಲಿ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆ ೧೯೬೬ನ್ನು ಜಾರಿಗೊಳಿಸುವುದು, ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಾದ ಕಾರ್ಕಳ, ಉಡುಪಿ ಹಾಗೂ ಕುಂದಾಪುರ ಇವುಗಳ ಕಾರ್ಯಚಟುವಟಿಕೆಗಳ ನಿಯಂತ್ರಣ ಮತ್ತು ಘೋಷಿತ ಹುಟ್ಟುವಳಿಗಳ (ಕೃಷಿ ಉತ್ಪನ್ನಗಳ ಮೇಲ್ವಿಚಾರಣೆ ನಡೆಸುವ ಸಮಿತಿಗಳ) ಮೇಲುಸ್ತುವಾರಿ ಮೊದಲಾದ ಧ್ಯೇಯೋದ್ದೇಶಗಳಿಂದ ಉಡುಪಿಯಲ್ಲಿ ಕೃಷಿ ಮಾರಾಟ ಇಲಾಖೆಯನ್ನು ಡಿಸೆಂಬರ್ ೧೯೯೭ರಲ್ಲಿ ಪ್ರಾರಂಭಿಸಲಾಯಿತು. ಈ ಕಛೇರಿಯು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಾಗ ಮೇ ಒಂದು ೧೯೬೮ರಿಂದಲೇ ಕಾರ್ಯನಿರ್ವಹಿಸುತ್ತಿತ್ತು. ಈ ಕಛೇರಿಯು ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿದ್ದು, ಸಹಾಯಕ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ. ಉಡುಪಿ, ಕುಂದಾಪುರ ಹಾಗೂ ಕಾರ್ಕಳಗಳಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿದ್ದು, ಕಾರ್ಯದರ್ಶಿಗಳು ಅವುಗಳ ಕಾರ್ಯಗಳನ್ನು ನೋಡಿಕೊಳ್ಳುತ್ತಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಮೊದಲಾದ ನಿಯಮ, ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

## ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಉಡುಪಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರವು ೧೯೯೯ರಲ್ಲಿ ಆರಂಭವಾಗಿದ್ದು, ಇದಕ್ಕೂ ಮೊದಲು ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿತ್ತು. ಈ ಕಛೇರಿಯ ಅಧಿಕಾರ ವ್ಯಾಪ್ತಿಯು ಜಿಲ್ಲಾ ಮಟ್ಟಕ್ಕೆ ಸೀಮಿತವಾಗಿದೆ. ಜಿಲ್ಲೆಯಲ್ಲಿ ಕೈಗಾರಿಕಾ ಬೆಳವಣಿಗೆಯ ದೃಷ್ಟಿಯಿಂದ ಹಾಗೂ ಹೆಚ್ಚೆಚ್ಚು ಉದ್ಯೋಗಗಳನ್ನು ಸೃಜಿಸಲು ಅನುಕೂಲವಾಗುವಂತೆ ಪ್ರತಿ ತಾಲೂಕುಗಳಲ್ಲೂ ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸುವುದು, ಜಾಗೃತಿ ಶಿಬಿರಗಳನ್ನು ನಡೆಸುವುದು, ಹೊಸದಾಗಿ ಸ್ಥಾಪನೆಯಾಗುವ ಕೈಗಾರಿಕೆಗಳಿಗೆ ಸರ್ಕಾರದಿಂದ ದೊರೆಯುವ ರಿಯಾಯಿತಿ ಹಾಗೂ ಪ್ರೋತ್ಸಾಹ ಸೌಲಭ್ಯಗಳ ಮಾಹಿತಿ ನೀಡಲು ವಿಚಾರಗೋಷ್ಠಿ, ವರ್ಕ್‌ಶಾಪ್ ಮೊದಲಾದವುಗಳನ್ನು ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ ನಡೆಸುತ್ತದೆ. ಕೈಗಾರಿಕೆಗಳು ತಯಾರಿಸುವ

ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುಗುವುದಕ್ಕಾಗಿ ಕೈಗಾರಿಕಾ ವಸ್ತು ಪ್ರದರ್ಶನ ಹಾಗೂ ಮಾರಾಟ ಏರ್ಪಡಿಸುವುದು ಹಾಗೂ ಇತರ ಜಿಲ್ಲೆ ಹಾಗೂ ರಾಜ್ಯಗಳಲ್ಲಿ ನಡೆಯುವ ವಸ್ತು ಪ್ರದರ್ಶನಗಳಿಗೆ ಜಿಲ್ಲೆಯ ಕೈಗಾರಿಕೋದ್ಯಮಿಗಳನ್ನು ವಿ.ಐ.ಟಿ.ಸಿ ಮುಖಾಂತರ ನಿಯೋಜನೆಯನ್ನು ಮಾಡುವುದರ ಮೂಲಕ ಕೈಗಾರಿಕೆಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತದೆ. ಜಂಟಿ ನಿರ್ದೇಶಕರು, ಈ ಕಛೇರಿಯ ಮುಖ್ಯಸ್ಥರಾಗಿದ್ದು, ಅವರಿಗೆ ಸಹಾಯಕ ನಿರ್ದೇಶಕರು, ಕೈಗಾರಿಕಾ ಉತ್ತೇಜನಾಧಿಕಾರಿ ಮತ್ತಿತರ ಅಧಿಕಾರಿ ಸಿಬ್ಬಂದಿ ಆಡಳಿತದಲ್ಲಿ ನೆರವಾಗಿದ್ದಾರೆ. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

**ಕಂದಾಯ ಇಲಾಖೆ**

ಪ್ರಸ್ತುತ ಕುಂದಾಪುರ ಉಪವಿಭಾಗೀಯ ಕಮೀಷನ್‌ರವರ ಕಛೇರಿಯು ಬ್ರಿಟಿಷರ ಕಾಲದಿಂದಲೂ ಅಸ್ತಿತ್ವದಲ್ಲಿದ್ದು, ಆಗಿನ ಹೆಸರು ಸಬ್ ಕಲೆಕ್ಟರ್ ಆಫೀಸ್ ಕುಂದಾಪುರ ಎಂದಾಗಿತ್ತು. ಸಹಾಯಕ ಕಮೀಷನರ್ ಮತ್ತು ಉಪವಿಭಾಗದ ದಂಡಾಧಿಕಾರಿ, ಕುಂದಾಪುರ ಉಪವಿಭಾಗ ಇವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ೧೯೫೬ರ ರಾಜ್ಯ ಪುನರ್ ವಿಂಗಡನೆ ನಂತರ ಸಹಾಯಕ ಕಮೀಷನರ್ ಮತ್ತು ಉಪವಿಭಾಗದ ದಂಡಾಧಿಕಾರಿ ಎಂದು ಬದಲಾವಣೆಗೊಂಡಿರುತ್ತದೆ. ಒಬ್ಬ ಭೂ ದಾಖಲೆಗಳ ಸಹಾಯಕ ನಿರ್ದೇಶಕರು (ಕಾರ್ಯ ನಿರ್ವಾಹಕ), ಒಬ್ಬ ವ್ಯವಸ್ಥಾಪಕರು, ಐದು ಮಂದಿ ಪ್ರಥಮ ದರ್ಜೆ ಸಹಾಯಕರು, ಮೂರು ಮಂದಿ ದ್ವಿತೀಯ ದರ್ಜೆ ಸಹಾಯಕರು, ಒಬ್ಬ ದ್ವಿತೀಯ ದರ್ಜೆ ಭೂ ಮಾಪಕರು ಮತ್ತಿತರ ಸಿಬ್ಬಂದಿ ಇರುತ್ತಾರೆ. ಈ ಉಪವಿಭಾಗದಲ್ಲಿ ಶಾಂತಿ ಸುವ್ಯವಸ್ಥೆ ಪರಿಪಾಲನೆ, ಮತದಾರರ ನೋಂದಣಾಧಿಕಾರಿ ಕೆಲಸ, ಲೋಕಸಭೆ ಹಾಗೂ ವಿಧಾನಸಭೆ ಚುನಾವಣಾ ಕೆಲಸ, ಜಿಲ್ಲಾ ಪಂಚಾಯತ್ ಕ್ಷೇತ್ರಗಳ ಚುನಾವಣಾಧಿಕಾರಿ, ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಸ್ಥಳೀಯ ಸಂಸ್ಥೆಗಳ ಚುನಾವಣಾ ಮೇಲ್ವಿಚಾರಣೆ, ಭೂ ಸ್ವಾಧೀನಾಧಿಕಾರಿ, ಶಿಷ್ಟಾಚಾರ, ಕಂದಾಯ ಮೇಲ್ಮನವಿ, ಪ್ರಾಕೃತಿಕ ವಿಕೋಪ ಪರಿಹಾರ, ಉಪವಿಭಾಗ ಮಟ್ಟದ ಕಂದಾಯ ಇಲಾಖೆಗಳಿಗೆ ಸಂಬಂಧಿಸಿದ ಆಡಳಿತ, ಭೂಕಂದಾಯ, ಇತರೇ ಸರಕಾರಿ ಬಾಕಿ ಮತ್ತು ಬ್ಯಾಂಕ್ ಸಾಲಗಳ ವಸೂಲಿ ಮೇಲ್ವಚಾರಣೆ, ವಾರ್ಷಿಕ ಜಮಾಬಂದಿ, ಭೂ ನ್ಯಾಯ ಮಂಡಳಿ ಅಧ್ಯಕ್ಷರಾಗಿ, ಅಕ್ರಮ, ಸಕ್ರಮ ಸಮಿತಿ ಮತ್ತು ತಾಲೂಕು ಕ್ರೀಡಾಂಗಣ ಸಮಿತಿಗಳ ಅಧ್ಯಕ್ಷರಾಗಿ ಕೆಲಸ ನಿರ್ವಹಿಸುವುದು, ಸರ್ಕಾರದ ಹಾಗೂ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ವಹಿಸಿಕೊಡಬಹುದಾದ ಮ್ಯಾಜಿಸ್ಟ್ರೀರಿಯಲ್ ತನಿಖೆ, ಜನಗಣತಿ ಮತ್ತಿತರ ಮುಖ್ಯ ಧ್ಯೇಯೋದ್ದೇಶಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ.

ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳು ಈ ಕಛೇರಿಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿವೆ. ಕುಂದಾಪುರ, ಉಡುಪಿ ಹಾಗೂ ಕಾರ್ಕಳ ತಾಲೂಕುಗಳ ತಹಸೀಲ್ದಾರರು, ವಿಶೇಷ ತಹಶೀಲ್ದಾರರು, ನಾಡಕಛೇರಿಗಳ ಉಪ ತಹಸೀಲ್ದಾರರು, ಹೋಬಳಿ ಮಟ್ಟದ ರಾಜಸ್ವ ನಿರೀಕ್ಷಕರ ಕಛೇರಿಗಳ ರಾಜಸ್ವ ನಿರೀಕ್ಷಕರು, ಗ್ರಾಮೀಣ ಮಟ್ಟದ ಗ್ರಾಮಕರಣಿಕರ ಕಛೇರಿಗಳ ಗ್ರಾಮಕರಣಿಕರು ಈ ಕಛೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪, ಕರ್ನಾಟಕ ಭೂ ಕಂದಾಯ ನಿಯಮಗಳು ೧೯೬೬, ಕರ್ನಾಟಕ ಭೂ ಮಂಜೂರಾತಿ ನಿಯಮಗಳು ೧೯೬೯, ಕರ್ನಾಟಕ ಭೂ ಸುಧಾರಣೆ ಕಾಯ್ದೆ ೧೯೬೧, ೧೯೭೪ರ ಭಾರತೀಯ ದಂಡ ಪ್ರಕ್ರಿಯೇ ಸಂಹಿತೆ ೧೯೭೧, ಭೂಸ್ವಾಧೀನ ಅಧಿನಿಯಮ ೧೯೯೪, ಪ್ರಜಾ ಪ್ರಾತಿನಿಧ್ಯ ಕಾಯ್ದೆ ೧೯೫೦, ೧೯೫೧ ಮತದಾರರ ನೋಂದಣಿ ನಿಯಮಗಳು ೧೯೬೦, ಚುನಾವಣೆ ನಡೆಸುವ ನಿಯಮಗಳು ೧೯೬೧, ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ ೧೯೯೩, ಕರ್ನಾಟಕ ಮುನ್ಸಿಪಲ್ ಕಾಯ್ದೆ ೧೯೬೪ ಮತ್ತು ನಿಯಮಗಳು ೧೯೬೫, ಕರ್ನಾಟಕ ನಾಗರೀಕಾ ಸೇವಾ ನಿಯಮಗಳು ೧೯೫೮, ಕೆ.ಎಫ್.ಸಿ ಮತ್ತಿತರ ನಿಯಮ ಅಧಿನಿಯಮಗಳನ್ನು ತನ್ನ ದೈನಂದಿನ ಕಛೇರಿ ಕೆಲಸಗಳಲ್ಲಿ ಅನುಸರಿಸುತ್ತಿದೆ. ಉಡುಪಿ ಜಿಲ್ಲಾಧಿಕಾರಿಗಳು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಗಣಿ ಮತ್ತು ಭೂ ವಿಜ್ಞಾನ ಇಲಾಖೆ

ಭೂ ವಿಜ್ಞಾನಿ ಕಛೇರಿ ಎಂದು ೧೯೭೦ ರಿಂದ ಕಾರ್ಯಾರಂಭಗೊಂಡ ಈ ಕಛೇರಿಯ ಹೆಸರು ೨೦೦೧ರಿಂದ ಉಪನಿರ್ದೇಶಕರ ಕಛೇರಿ ಎಂದು ಬದಲಾಗಿರುತ್ತದೆ. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳು ಇವರ ಆಡಳಿತಾಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದು, ಹಿರಿಯ ಭೂವಿಜ್ಞಾನಿ, ಭೂವಿಜ್ಞಾನಿ, ಕೊರೆಯುವ ಅಭಿಯಂತರ (ಕೊಳವೆ ಬಾವಿ), ಹಿರಿಯ ಭೂಭೌತಶಾಸ್ತ್ರಜ್ಞ, ಅಧೀಕ್ಷಕ ಮೊದಲಾದ ಅಧಿಕಾರಿ, ಸಿಬ್ಬಂದಿ ವರ್ಗ ಇವರಿಗೆ ನೆರವಾಗುತ್ತಿದೆ. ಉಪಖನಿಜ ಮತ್ತು ಪ್ರಧಾನ ಖನಿಜಗಳ ರವಾನೆಗೆ ಪರವಾನಿಗೆ ನೀಡುವುದು, ಕಲ್ಲುಗಣಿ ಗುತ್ತಿಗೆ ಕರಾರು ಮಂಜೂರು ಮಾಡುವುದು, ರಾಜಸ್ವ ವಸೂಲಾತಿ, ಕೊಳವೆ ಬಾವಿಗಳಲ್ಲಿನ ನೀರು ಇಳುವರಿ ಪರೀಕ್ಷೆ ಮಾಡುವುದು, ಅನಧಿಕೃತ ಗಣಿಗಾರಿಕೆಯನ್ನು ತಡೆಯುವುದು ಮತ್ತು ದಂಡ ಹಾಕುವುದು ಮೊದಲಾದ ಕಾರ್ಯಗಳನ್ನು ಈ ಕಛೇರಿ ನೋಡಿಕೊಳ್ಳುತ್ತದೆ. ಕರ್ನಾಟಕ ಉಪ ಖನಿಜ ನಿಯಮ ೧೯೯೪, ಎಂ.ಎಂ.ಆರ್.ಡಿ.ಎಸ್. ೧೯೫೭ ಮೊದಲಾದ ಕಾಯಿದೆ ನಿಯಮಗಳನ್ನು ಈ ಕಛೇರಿ ಅನುಸರಿಸುತ್ತದೆ. ಜಂಟಿ ನಿರ್ದೇಶಕರು, ದಕ್ಷಿಣ ವಲಯ, ಮೈಸೂರು ಮೇಲಧಿಕಾರಿಯಾಗಿರುತ್ತಾರೆ.

## ಜಲಾನಯನ ಅಭಿವೃದ್ಧಿ ಇಲಾಖೆ

ಕೃಷಿ ಮತ್ತು ತೋಟಗಾರಿಕಾ ಘಟಕಗಳನ್ನು ಒಳಗೊಂಡ ಪ್ರತ್ಯೇಕ ಜಲಾನಯನ ಅಭಿವೃದ್ಧಿ ಇಲಾಖೆಯು ಏಪ್ರಿಲ್-೨೦೦೦ದಲ್ಲಿ ಅಸ್ತಿತ್ವಕ್ಕೆ ಬಂದಿತು. ಇದಕ್ಕೂ ಪೂರ್ವದಲ್ಲಿ ಖುಷ್ಕಿ ಭೂ ಅಭಿವೃದ್ಧಿ ಮಂಡಳಿಯ ಅಧೀನದಲ್ಲಿದ್ದ ಈ ಕಛೇರಿಯು ಯೋಜನಾ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಕಾರ್ಯಕ್ರಮ ಉಡುಪಿ ಎಂಬ ಹೆಸರಿನಿಂದ ಕಾರ್ಯಪ್ರವೃತ್ತವಾಗಿತ್ತು. ಪ್ರಸ್ತುತ ಖುಷ್ಕಿ ಭೂ ಅಭಿವೃದ್ಧಿ ಮಂಡಳಿಯು ರದ್ದಾಗಿರುತ್ತದೆ. ಈ ಇಲಾಖೆಯು ಎರಡು ಜಿಲ್ಲೆಗಳಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ನೆರವಿನ ಯೋಜನೆ, ಜಿಲ್ಲಾ ಪಂಚಾಯತ್‌ನ ವಿವಿಧ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯಾಯ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಅನುಷ್ಠಾನಗೊಳಿಸುತ್ತಿದೆ. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ ಈ ಇಲಾಖೆಯ ಮುಖ್ಯಸ್ಥರಾಗಿದ್ದು, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಅಧಿಕಾರ ಹೊಂದಿರುತ್ತಾರೆ. ಇವರ ನೆರವಿಗೆ ಸಹಾಯಕ ಕೃಷಿ ನಿರ್ದೇಶಕರು (ತಾಂತ್ರಿಕ) ಕೇಂದ್ರ, ಅಧೀಕ್ಷಕ, ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರು ಮೊದಲಾದ ಅಧಿಕಾರಿ ಸಿಬ್ಬಂದಿ ಇದ್ದಾರೆ. ಇವರ ಅಧೀನದಲ್ಲಿ ಕೃಷಿ ಘಟಕ-I ಉಡುಪಿ (ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಕೃಷಿ ಘಟಕ- II, ಮಂಗಳೂರು (ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ), ತೋಟಗಾರಿಕಾ ಘಟಕ (ಸಹಾಯಕ ತೋಟಗಾರಿಕಾ ನಿರ್ದೇಶಕರು ಈ ಘಟಕದ ಮುಖ್ಯಸ್ಥರಾಗಿರುತ್ತಾರೆ) ಹಾಗೂ ಅರಣ್ಯ ಘಟಕ (ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಈ ಘಟಕ ಮುಖ್ಯಸ್ಥರಾಗಿರುತ್ತಾರೆ)ಗಳಿವೆ.

ತಾಲೂಕು ಮಟ್ಟದಲ್ಲಿ ಇಲಾಖೆಗೆ ಪ್ರತ್ಯೇಕ ಕಛೇರಿಯು ಇರುವುದಿಲ್ಲ. ಆದರೆ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆಯಡಿಯಲ್ಲಿ ತಾಲೂಕಿನ ಯೋಜನಾ ಅನುಷ್ಠಾನ ಸಂಸ್ಥೆಯ ಮುಖ್ಯಸ್ಥರಾಗಿ ಕೃಷಿ ಅಧಿಕಾರಿಯವರು ಅಧಿಕಾರ ಹೊಂದಿರುತ್ತಾರೆ. ಪಶ್ಚಿಮ ಘಟ್ಟ ಜಲಾನಯನ ಅಭಿವೃದ್ಧಿ ಯೋಜನೆ ಹಾಗೂ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆಗಳಡಿಯಲ್ಲಿ ಆರಿಸಿದ ಜಲಾನಯನಗಳಲ್ಲಿ ಜಲಾನಯನ ಅಭಿವೃದ್ಧಿ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮುಖ್ಯವಾಗಿ ಭೂ ಸಾರ ಸಂರಕ್ಷಣೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕೃಷಿ ಘಟಕದಿಂದ ಸಾಗುವಳಿ ಮತ್ತು ಸಾಗುವಳಿಯೇತರ ಹಾಗೂ ಜಲವಾಹಿನಿಗಳಲ್ಲಿ ಕೃಷಿ ಹೊಂಡ, ಕೊರಕಲು ತಡೆ, ಸಸ್ಯಬದು, ನಾಲಾಬದು, ತಡೆಅಣೆಕಟ್ಟು, ಕಿಂಡಿ ಅಣೆಕಟ್ಟು ಇತ್ಯಾದಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ತೋಟಗಾರಿಕೆ ಹಾಗೂ ಅರಣ್ಯ ಘಟಕಗಳಿಂದ ಸಾಗುವಳಿ ಮತ್ತು

ಸಾಗುವಳಿಯೇತರ ಭೂಮಿ, ಖಾಸಗಿ ಮತ್ತು ಸಮುದಾಯ ಜಮೀನಿನಲ್ಲಿ ಗಿಡಗಳನ್ನು ನೆಡುವ ಕೆಲಸದಲ್ಲಿ ಇಲಾಖೆಯು ಕಾರ್ಯಪ್ರವೃತ್ತವಾಗಿದೆ. ಈ ಕಾರ್ಯಾಲಯವು ಕರ್ನಾಟಕ ನಾಗರೀಕ ಸೇವಾ ನಿಯಮಗಳು ಮತ್ತಿತರ ನಿಯಮ, ಅಧಿನಿಯಮಗಳನ್ನು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಗಳಾಗಿರುತ್ತಾರೆ.

## ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ

ಈ ಕಛೇರಿಯು ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಪ್ರತಿಬಂಧಕ (ಪ್ರಿವೆಂಟಿವ್), ಉತ್ತೇಜಕ (ಪ್ರೊಮೋಟಿವ್), ಗುಣಕಾರಿ (ಕ್ಯೂರೆಟಿವ್) ಹಾಗೂ ಪುನರ್ವಸತಿ (ರಿಹ್ಯಾಬಿಲಿಟೇಟಿವ್) ಯಡಿಯಲ್ಲಿ ಆರೋಗ್ಯ ಅರಿವು ಮೂಡಿಸುವುದು, ಲಸಿಕಾ ಕಾರ್ಯಕ್ರಮ, ಅಂಗನವಾಡಿ, ವಸತಿನಿಲಯ, ಪ್ರಾಥಮಿಕ ಹಾಗೂ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಆರೋಗ್ಯ ಸೌಲಭ್ಯ ಒದಗಿಸುವುದು, ಮೇಡಿಕೋ ಲೀಗಲ್ ಕೇಸ್ ನಿರ್ವಹಣೆ ಮತ್ತಿತರ ಉದ್ದೇಶದಿಂದ ಉಡುಪಿಯಲ್ಲಿ ೧೯೯೭ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರ ಅಧೀನದಲ್ಲಿ ತಾಲೂಕು ಆರೋಗ್ಯಾಧಿಕಾರಿ ಕಛೇರಿ ಉಡುಪಿ, ಕುಂದಾಪುರ ಹಾಗೂ ಕಾರ್ಕಳಗಳಲ್ಲಿವೆ. ಇವರ ನೆರವಿಗೆ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ, ಜಿಲ್ಲಾ ಸಂತಾನೋತ್ಪತ್ತಿ ಮಕ್ಕಳ ಅಧಿಕಾರ (ಆರ್.ಸಿ.ಹೆಚ್) ಜಿಲ್ಲಾ ಮಲೇರಿಯಾಧಿಕಾರಿ, ಜಿಲ್ಲಾ ಕುಷ್ಟರೋಗ ನಿಯಂತ್ರಣಾದಿಕಾರಿ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ, ತಾಲೂಕು ಆರೋಗ್ಯಾಧಿಕಾರಿ, ವೈದ್ಯಾಧಿಕಾರಿಗಳು, ಪತ್ರಾಂಕಿತ ಸಹಾಯಕರು, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ, ಜಿಲ್ಲಾ ಸುಶ್ರೂಷಣಾಧಿಕಾರಿ (ಡಿ.ಎನ್.ಒ) ಮತ್ತೀತರ ಅಧಿಕಾರಿ ಸಿಬ್ಬಂದಿ ಇದ್ದಾರೆ. ಕೆ.ಸಿ.ಎಸ್.ಆರ್, ಎಂ.ಸಿ.ಇ, ಬಜೆಟ್ ಮ್ಯಾನ್ಯುಯಲ್, ಮೆಡಿಕಲ್ ಟರ್ಮಿನೇಷನ್ ಆಫ್ ಪ್ರೆಗ್ನೆನ್ಸಿ ಆಕ್ಟ್ ಮತ್ತು ಪಿ ಆಂಡ್ ಡಿ. ಟಿ. ಆಕ್ಟ್ ಮೊದಲಾದ ಕಾಯಿದೆ ಹಾಗೂ ನಿಯಮಗಳನ್ನು ಈ ಕಛೇರಿಯು ಅನುಸರಿಸುತ್ತಿದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್ ಉಡುಪಿ/ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ

ಉದ್ಯೋಗ ಮಾಹಿತಿ, ಮಾರ್ಗದರ್ಶನ, ಉದ್ಯೋಗ ಮಾರುಕಟ್ಟೆ ಮಾಹಿತಿ ಸಂಗ್ರಹಣೆ ಮತ್ತು ವರದಿಗಳನ್ನು ರಾಜ್ಯ ಹಾಗೂ ಕೇಂದ್ರ ಕಛೇರಿಗಳಿಗೆ ನೀಡುವುದೇ ಮೊದಲಾದ ಧ್ಯೇಯೋದ್ದೇಶಗಳನ್ನು ಹೊಂದಿರುವ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯು, ರಾಜ್ಯ ಪುನರ್ ರಚನೆಗೆ ಮೊದಲು ೧೯೫೧ ರಿಂದ ಕಾರ್ಯನಿರ್ವಹಿಸುತ್ತಿತ್ತು. ನೂತನ ಉಡುಪಿ ಜಿಲ್ಲೆ ಅಸ್ತಿತ್ವಕ್ಕೆ ಬಂದ ನಂತರ ಈ ಕಛೇರಿಯು ಜನವರಿ ಏಳು ೧೯೯೮ ರಿಂದ ಉಡುಪಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಈ ಕಛೇರಿಯ ವ್ಯಾಪ್ತಿಗೆ ಜಿಲ್ಲೆಯ ಮೂರು ತಾಲೂಕುಗಳು (ಕುಂದಾಪುರ, ಉಡುಪಿ ಮತ್ತು ಕಾರ್ಕಳ) ಒಳಪಡುತ್ತವೆ. ಈ ಕಛೇರಿಗೆ ಉದ್ಯೋಗಾಧಿಕಾರಿ ಮುಖ್ಯಸ್ಥರಾಗಿದ್ದು, ಸಹಾಯಕ ಉದ್ಯೋಗಾಧಿಕಾರಿ, ಪ್ರಥಮ ದರ್ಜೆ ಸಹಾಯಕ, ದ್ವಿತೀಯ ದರ್ಜೆ ಸಹಾಯಕ ಮತ್ತಿತರ ಸಿಬ್ಬಂದಿಯನ್ನು ಹೊಂದಿರುತ್ತಾರೆ. ಉದ್ಯೋಗ ನೋಂದಣಿ, ನವೀಕರಣ, ಉದ್ಯೋಗಕ್ಕೆ ನಿಯೋಜಕರ ಬೇಡಿಕೆಗೆ ತಕ್ಕಂತೆ ಅಭ್ಯರ್ಥಿಗಳ ಪುರಸ್ಕರಣೆ, ಸಂಚಾರಿ ನೋಂದಣಿ, ಶಾಲಾ ಕಾಲೇಜುಗಳಲ್ಲಿ ವೃತ್ತಿ ಸಾಹಿತ್ಯ ಪ್ರದರ್ಶನ ಮತ್ತು ವೃತ್ತಿ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುವುದು ಮೊದಲಾದ ಚಟುವಟಿಕೆಗಳನ್ನು ಈ ಕಛೇರಿಯು ಹಮ್ಮಿಕೊಂಡಿದೆ. ರಾಷ್ಟ್ರೀಯ ಉದ್ಯೋಗ ಸೇವಾ ಕೈಪಿಡಿ (NESM) ನಿಯಮ, ೧೯೫೯ರ ಹುದ್ದೆಗಳ ಕಡ್ಡಾಯ ಅಧಿಸೂಚನಾ ಅದಿನಿಯಮ ಹಾಗೂ ೧೯೬೦ರ ಹುದ್ದೆಗಳ ಕಡ್ಡಾಯ ಅಧಿಸೂಚನಾ ನಿಯಮ ಮುಂತಾದ ನಿಯಮ, ಅಧಿನಿಯಮಗಳನ್ನು ಈ ಕಛೇರಿಯು ಅನುಸರಿಸುತ್ತದೆ. ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರು ಅವರು ತತ್‌ಕ್ಷಣದ ಮೇಲಧಿಕಾರಿಯಾಗಿದ್ದಾರೆ.

## ಜಿಲ್ಲಾ ಖಜಾನೆ ಇಲಾಖೆ

ಹಿಂದೆ, ರಾಜಸ್ವ ಇಲಾಖೆಯ ವ್ಯಾಪ್ತಿಯಲ್ಲಿದ್ದ ಈ ಕಛೇರಿಯು ೧೯೬೪ ರಿಂದ ಆರ್ಥಿಕ ಇಲಾಖೆಯ ಅಧೀನದಲ್ಲಿದ್ದ ಖಜಾನೆ ನಿರ್ದೇಶನಾಲಯಕ್ಕೆ ಒಳಪಡುತ್ತದೆ. ಪ್ರಸ್ತುತ ಉಡುಪಿ ಜಿಲ್ಲೆಯು ೧೯೯೭–೯೮ ರಿಂದ ಪ್ರತ್ಯೇಕ ಜಿಲ್ಲೆಯಾಗಿದ್ದು, ಜಿಲ್ಲಾ ಖಜಾನೆ ೧೯೯೮ರಲ್ಲಿ ಸ್ಥಾಪಿಸಲ್ಪಟ್ಟಿದೆ. ಜಿಲ್ಲಾ ಖಜಾನಾಧಿಕಾರಿ ಅವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಸಹಾಯಕ ಖಜಾನಾಧಿಕಾರಿ, ಮುಖ್ಯ ಲೆಕ್ಕಿಗರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ಇವರ ಸಹಾಯಕ್ಕಿರುತ್ತಾರೆ. ಈ ಕಛೇರಿಯ ಅಧೀನದಲ್ಲಿ ತಾಲೂಕು ಮಟ್ಟದಲ್ಲಿ ಕುಂದಾಪುರ ಮತ್ತು ಕಾರ್ಕಳಗಳಲ್ಲಿ ಉಪ–ಖಜಾನೆಗಳಿದ್ದು, ಅವುಗಳ ಮುಖ್ಯಸ್ಥರು ಉಪ ಖಜಾನಾಧಿಕಾರಿಗಳಾಗಿರುತ್ತಾರೆ. ಅಲ್ಲದೆ ನಾಲ್ಕು ಹೋಬಳಿ ಮಟ್ಟದ ಉಪ–ಖಜಾನೆಗಳು ಬೈಂದೂರು, ಶಂಕರನಾರಾಯಣ, ಬ್ರಹ್ಮಾವರ ಹಾಗೂ ಹೆಬ್ರಿಗಳಲ್ಲಿವೆ.

ಸರ್ಕಾರದ ವಿವಿಧ ಇಲಾಖೆಗಳ ಜಮಾ ಮತ್ತು ಪಾವತಿಗೆ ಸಂಬಂಧಿಸಿದ ಲೆಕ್ಕಪತ್ರ ನಿರ್ವಹಣೆ ಮಾಡುವುದು ಈ ಕಛೇರಿಯ ಮುಖ್ಯ ಧ್ಯೇಯೋದ್ದೇಶವಾಗಿದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಮ್ಯಾನುವೆಲ್ ಆಫ್ ಕಂಟಿಜೆನ್ಸಿ ಎಕ್ಸ್‌ಪೆಂಡಿಚರ್, ಬಜೆಟ್ ಮ್ಯಾನುವೆಲ್ ಮೊದಲಾದ ನಿಗದಿತ ಕಾಯಿದೆ ಮತ್ತು ನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ನಿರ್ದೇಶಕರು ಖಜಾನೆ ನಿರ್ದೇಶನಾಲಯ ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಜಿಲ್ಲಾ ತೋಟಗಾರಿಕೆ ಇಲಾಖೆ

ವಿವಿಧ ಯೋಜನೆಗಳಡಿಯಲ್ಲಿ ಬೇಸಾಯಗಾರರಿಗೆ ಸೂಕ್ತವಾದ ಬೆಳೆ ಸಾಮಗ್ರಿಗಳನ್ನು ಸರಬರಾಜು ಮಾಡುವುದು, ಪ್ರಚಾರ ಹಾಗೂ ತಾಂತ್ರಿಕ ತಿಳುವಳಿಕೆಯನ್ನು ಕೊಡುವ ಮೂಲಕ ಹಣ್ಣುಗಳ, ತರಕಾರಿಗಳ, ಮಸಾಲೆ ಪದಾರ್ಥಗಳ ಬೆಳೆಗಳ ವೃದ್ಧಿ ಮತ್ತಿತರ ಧ್ಯೇಯೋದ್ದೇಶಗಳೊಂದಿಗೆ ಈ ಇಲಾಖೆಯು ಉಡುಪಿಯಲ್ಲಿ ಜುಲೈ, ೨೦೦೦ದಲ್ಲಿ ಸ್ಥಾಪಿತಗೊಂಡಿತು. ತೋಟಗಾರಿಕೆ ಉಪನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಸಹಾಯಕ ತೋಟಗಾರಿಕೆ ಅಧಿಕಾರಿ, ಅಧೀಕ್ಷಕರು, ಪ್ರಥಮ, ದ್ವಿತೀಯ ದರ್ಜೆ ಸಹಾಯಕರು, ಮತ್ತಿತರ ಅಧಿಕಾರಿ ಸಿಬ್ಬಂದಿಗಳು ಇವರಿಗೆ ನೆರವಾಗುತ್ತಿದ್ದಾರೆ. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಉಡುಪಿ, ಕುಂದಾಪುರ ಹಾಗೂ ಕಾರ್ಕಳಗಳಲ್ಲಿ ಕರ್ತವ್ಯ ನಿರತರಾಗಿದ್ದು, ಅವರ ಅಧೀನ ಕಛೇರಿಗಳಾಗಿವೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಗಳಾಗಿದ್ದಾರೆ.

## ಜಿಲ್ಲಾ ಪಂಚಾಯತ್ ಕಛೇರಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸೇರಿದ ಜಿಲ್ಲಾ ಪಂಚಾಯತ್ ಏಪ್ರಿಲ್ ಒಂದು, ೧೯೯೮ ರಿಂದ ಉಡುಪಿಯಲ್ಲಿ ಅಸ್ತಿತ್ವಕ್ಕೆ ಬಂದಿತು. ಅರ್ಥಪೂರ್ಣ ಯೋಜನೆಯ ತಯಾರಿಕೆ ಮತ್ತು ಪರಿಣಾಮಕಾರಿ ಜಿಲ್ಲಾ ಯೋಜನೆಯ ಕಾರ್ಯಗಳ ನೆರವೇರಿಕೆಯಲ್ಲಿ, ಚುನಾಯಿತರಾದ ಪ್ರತಿನಿಧಿಗಳನ್ನೊಳಗೊಂಡ ಕಾರ್ಯನಿರ್ವಹಣೆ ಮಾಡುವ ಪ್ರಧಾನ ಸಂಸ್ಥೆಯು ಜಿಲ್ಲಾ ಮಟ್ಟದಲ್ಲಿಲ್ಲದೆ ಒಂದು ದೊಡ್ಡ ಕೊರತೆಯಾಗಿತ್ತು. ಅದಕ್ಕಾಗಿ ಸರ್ಕಾರ ೧೯೭೮ರ ಅಶೋಕ ಮೆಹ್ತಾ ಸಮಿತಿಯ ವರದಿಯಂತೆ ಸಮಗ್ರ ತಿದ್ದುಪಡಿಗಳನ್ನೊಳಗೊಂಡ ಹೊಸ ಪಂಚಾಯತ್ ರಾಜ್ ಕಾನೂನನ್ನು ೧೯೮೫ರಲ್ಲಿ ಜಾರಿಗೊಳಿಸಿತು. ಹೀಗೆ ೧೯೮೫ರ ಪಂಚಾಯತ್‌ರಾಜ್ ಕಾಯ್ದೆಯನ್ನು ಸಮಗ್ರವಾಗಿ ಜಾರಿಗೊಳಿಸಿದ ಪ್ರಪ್ರಥಮ ರಾಜ್ಯ ಕರ್ನಾಟಕ. ಏಪ್ರಿಲ್ ೧೯೮೭ರಲ್ಲಿ ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಜಿಲ್ಲಾ ಪರಿಷತ್ತು ಹಾಗೂ ಮಂಡಲ ಪಂಚಾಯ್ತಿಗಳ ಸ್ಥಾಪನೆಯಿಂದಾಗಿ ಈ ಕೊರತೆಯನ್ನು ತುಂಬಲಾಗಿದೆ. ಸ್ಥಳೀಯ ಸ್ವಯಮಾಡಳಿತ

ಸಂಸ್ಥೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಪರಿವರ್ತಿಸುವ ಉದ್ದೇಶದಿಂದ ಸರ್ಕಾರವು ೧೯೯೩ರ ಮೇ ೧೦ ರಂದು ಪಂಚಾಯತ್‌ರಾಜ್ ಕಾಯ್ದೆಯನ್ನು ಜಾರಿಗೊಳಿಸಿತು. ಪರಿಣಾಮವಾಗಿ ಹಿಂದಿನ ಮಂಡಲ ಪಂಚಾಯ್ತಿ, ತಾಲೂಕು ಪಂಚಾಯ್ತಿ ಸಮಿತಿ ಹಾಗೂ ಜಿಲ್ಲಾ ಪರಿಷತ್‌ಗಳು ಕ್ರಮವಾಗಿ ಗ್ರಾಮ ಪಂಚಾಯ್ತಿ, ತಾಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿಗಳಾಗಿ ರೂಪುಗೊಂಡಿವೆ. ಜಿಲ್ಲಾ ಪಂಚಾಯತ್ ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಜಿಲ್ಲಾ ಪಂಚಾಯಿತಿಯು ಯೋಜನಾ ವಲಯದಡಿ ೩೩ ವಲಯಗಳ ೪೩೫ ಕಾರ್ಯಕ್ರಮಗಳನ್ನೂ, ಯೋಜನೇತರ ವಲಯದಲ್ಲಿ ೨೭ ವಲಯಗಳ ೨೩೦ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಜಿಲ್ಲಾ ಪಂಚಾಯ್ತಿಯು ಕಾಲಕಾಲಕ್ಕೆ ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸೂಕ್ತ, ಸಲಹೆ, ಸೂಚನೆ, ಮಾರ್ಗದರ್ಶನ ನೀಡುವುದರ ಜೊತೆಗೆ ಸಮನ್ವಯತೆ ಹಾಗೂ ನಿಯಂತ್ರಣವನ್ನು ಹೊಂದಿರುತ್ತದೆ. ಜಿಲ್ಲಾ ಪಂಚಾಯತ್ ಉಡುಪಿ ಇದರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿಗಳು ಹೀಗಿವೆ. ಅರಣ್ಯ ಇಲಾಖೆ, ಆರೋಗ್ಯ ಇಲಾಖೆ, ಇಂಜಿನಿಯರಿಂಗ್ ಇಲಾಖೆ, ಕೃಷಿ ಇಲಾಖೆ, ಕೈಗಾರಿಕಾ ಇಲಾಖೆ, ತೋಟಗಾರಿಕಾ ಇಲಾಖೆ, ಪಶುಪಾಲನೆ ಮತ್ತು ಪಶು ವೈದ್ಯಕೀಯ ಇಲಾಖೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮೀನುಗಾರಿಕಾ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ರೇಷ್ಮೆ ಇಲಾಖೆ, ವಯಸ್ಕರ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸಹಕಾರ ಇಲಾಖೆ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಜಿಲ್ಲಾ ಜಲಾನಯನ ಇಲಾಖೆ, ಯುವ ಜನ ಸೇವಾ ಮತ್ತು ಕ್ರೀಡಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಲ್ಲದೆ ತಾಲೂಕು ಮಟ್ಟದಲ್ಲಿ ತಾಲೂಕು ಪಂಚಾಯತ್, ಉಡುಪಿ, ಕುಂದಾಪುರ ಹಾಗೂ ಕಾರ್ಕಳ ಹಾಗೂ ಗ್ರಾಮಮಟ್ಟದಲ್ಲಿ ಗ್ರಾಮ ಪಂಚಾಯತ್ ಕಛೇರಿಗಳು ಸೇರಿವೆ. ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ.

## ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ

ಯುವಜನರಲ್ಲಿ ಕ್ರೀಡಾಸಕ್ತಿ ಬೆಳೆಸುವುದು, ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಆರೋಗ್ಯ ಪೂರ್ಣ ಯುವಶಕ್ತಿಯನ್ನು ರೂಪಿಸುವ ಧ್ಯೇಯೋದ್ದೇಶಗಳೊಂದಿಗೆ ಈ ಇಲಾಖೆಯು ಉಡುಪಿಯಲ್ಲಿ ೨೦೦೩ರಲ್ಲಿ ಪ್ರಾರಂಭವಾಯಿತು. ಅದಕ್ಕೂ ಮೊದಲು (ಈ ಜಿಲ್ಲೆಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಾಗ) ಮಂಗಳೂರಿನಲ್ಲಿ ೧೯೭೫ ರಿಂದ ಈ ಇಲಾಖಾ ಕಛೇರಿಯು ಕಾರ್ಯನಿರ್ವಹಿಸುತ್ತಿತ್ತು. ಯುವಕ/ಯುವತಿ ಮಂಡಳಿಗಳ ರಚನೆ, ನೋಂದಾವಣಿ, ನವೀಕರಣ, ಆ ಮೂಲಕ ಯುವ ಚಟುವಟಿಕೆಗಳಾದ ಯುವಜನ ಮೇಳ, ಸಾಂಸ್ಕೃತಿಕ ಸ್ಪರ್ಧೆಗಳು, ಯುವಜನೋತ್ಸವ, ಯುವ ಸಂಪರ್ಕ ಸಭೆ, ಮತ್ತಿತರ ಗ್ರಾಮೀಣ ಸಾಂಸ್ಕೃತಿಕ ಕಲೆಗಳು ನಶಿಸಿ ಹೋಗದಂತೆ ಅವುಗಳಿಗೆ ಪುನಶ್ಚೇತನ ನೀಡುವುದು ಇಲಾಖೆಯ ಪ್ರಮುಖ ಕರ್ತವ್ಯವಾಗಿರುತ್ತದೆ. ಯುವಕ ಸಂಘ, ಯುವತಿ ಮಂಡಳಿಗಳಿಗೆ ಜಿಲ್ಲಾ ಪಂಚಾಯತ್‌ನಿಂದ ಅನುದಾನ ಪಡೆದುಕೊಂಡು ಎರಡು ಸಾವಿರ ರೂಪಾಯಿಗಳನ್ನು ಸಲಕರಣೆ ಖರೀದಿಗಾಗಿ, ರೂ. ೨೫,೦೦೦ ಗಳನ್ನು ಕಟ್ಟಡ ನಿರ್ಮಾಣಕ್ಕಾಗಿ ಒದಗಿಸಲಾಗುತ್ತಿದೆ. ಕ್ರೀಡಾ ಚಟುವಟಿಕೆಗಳಾದ ದಸರಾ ಕ್ರೀಡಾ ಕೂಟ, ಗ್ರಾಮೀಣ ಕ್ರೀಡಾಕೂಟ, ಮಹಿಳಾ ಕ್ರೀಡಾ ಕೂಟಗಳನ್ನು ತಾಲೂಕು ಮಟ್ಟದಿಂದ ರಾಜ್ಯಮಟ್ಟದವರೆಗೆ ಸಂಘಟಿಸಲಾಗುವುದು. ಸದರಿ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಪ್ರಶಸ್ತಿ ಪತ್ರ, ಬಹುಮಾನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಜಿಲ್ಲಾ ಮಟ್ಟದಿಂದ ವಿಭಾಗ ಮಟ್ಟ, ರಾಜ್ಯ ಮಟ್ಟದವರೆಗೆ ಭಾಗವಹಿಸುವ ಕ್ರೀಡಾ ಪಟುಗಳಿಗೆ ದಿನಭತ್ಯೆ, ಪ್ರಯಾಣ ಭತ್ಯೆಯನ್ನು ಇಲಾಖಾ ವತಿಯಿಂದ ನೀಡಲಾಗುವುದು. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಜಿಲ್ಲಾ ಯುವಜನಸೇವಾ ಮತ್ತು ಕ್ರೀಡಾಧಿಕಾರಿ ಅವರು ಕಛೇರಿಯ ಮುಖ್ಯಸ್ಥರಾಗಿದ್ದು, ಇವರ ನೆರವಿಗೆ ಅಧೀಕ್ಷಕ, ದ್ವಿತೀಯ ದರ್ಜೆ ಸಹಾಯಕ ಮತ್ತಿತರ ಸಿಬ್ಬಂದಿ ಇದ್ದಾರೆ. ಆಯುಕ್ತರು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ

ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಅವರ ಕಛೇರಿಯು ೧೭-೦೮-೧೯೯೮ರಲ್ಲಿ ಉಡುಪಿಯಲ್ಲಿ ಆರಂಭಗೊಂಡಿತು. ರಾಜ್ಯಗಳ ಪುನರ್ ರಚನೆಗೂ ಮೊದಲು ಮದರಾಸು ಸರ್ಕಾರದ ಅಧೀನದಲ್ಲಿ "ಡೈರೆಕ್ಟರ್ ಆಫ್ ಹರಿಜನ್ ವೆಲ್‌ಫೇರ್" ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಕಛೇರಿಯು ೧೯೫೬ರಿಂದಲೇ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಎಂದು ಬದಲಾವಣೆಗೊಂಡಿತು. ಈ ಕಛೇರಿಯ ಮುಖ್ಯಸ್ಥರಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಇದ್ದು, ಅವರಿಗೆ ಆಡಳಿತದಲ್ಲಿ ನೆರವಾಗಲು ಮ್ಯಾನೇಜರ್, ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರು, ಮತ್ತಿತರ ಸಿಬ್ಬಂದಿ ವರ್ಗವಿದೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಈ ಕಛೇರಿಯು ಪರಿಶಿಷ್ಟ ಜಾತಿಯವರ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಶ್ರೇಯೋಭಿವೃದ್ಧಿಗಾಗಿ ಸರಕಾರ ಹಮ್ಮಿಕೊಳ್ಳುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದೇ ಈ ಕಛೇರಿಯ ಮುಖ್ಯ ಧ್ಯೇಯೋದ್ದೇಶವಾಗಿವೆ. ಅಂತೆಯೇ ಪರಿಶಿಷ್ಟ ಜಾತಿಯವರಿಗಾಗಿ ಇರುವ ವಿಶೇಷ ಘಟಕ ಯೋಜನೆಯ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು, ವಿದ್ಯಾರ್ಥಿಗಳಿಗಾಗಿ ಇರುವ ವಿದ್ಯಾರ್ಥಿ ವೇತನ, ಪ್ರೋತ್ಸಾಹ ಧನ ನೀಡುವುದು, ವಿದ್ಯಾರ್ಥಿ ನಿಲಯಗಳು ಹಾಗೂ ವಸತಿ ಶಾಲೆಗಳನ್ನು ನಡೆಸುವುದು. ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದ ಅನುಷ್ಠಾನ, ಮೀಸಲಾತಿ ಅನುಷ್ಠಾನದ ಉಸ್ತುವಾರಿ ಮೊದಲಾದ ಚಟುವಟಿಕೆಗಳನ್ನು ನಡೆಸುತ್ತಿದೆ.

ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಈ ಕಛೇರಿಯ ಅಧೀನದಲ್ಲಿ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳು, ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿಯವರ ಕಲ್ಯಾಣ ಕಾರ್ಯಕ್ರಮಗಳೊಂದಿಗೆ ಪರಿಶಿಷ್ಟ ವರ್ಗದವರ ಕಲ್ಯಾಣ ಕಾರ್ಯಕ್ರಮಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ. ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯಿದೆ ೧೯೮೯, ಸೋಷಿಯಲ್ ವೆಲ್‌ಫೇರ್ ಮ್ಯಾನ್ಯುಯಲ್ ಮೊದಲಾದ ಕಾಯಿದೆ, ನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯಗಳಲ್ಲಿ ಅನುಸರಿಸುತ್ತದೆ. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಮೇಲಧಿಕಾರಿಯಾಗಿರುತ್ತಾರೆ.

## ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಆಸ್ತಿಗಳು, ವಿವಾಹಗಳು ಹಾಗೂ ಸಂಘಸಂಸ್ಥೆಗಳನ್ನು ನೋಂದಣಿ ಮಾಡುವ ಮುಖ್ಯ ಧ್ಯೇಯೋದ್ದೇಶಗಳನ್ನು ಹೊಂದಿರುವ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಜಿಲ್ಲಾ ಕಛೇರಿಯ ಮುಖ್ಯಸ್ಥರಾಗಿ ಜಿಲ್ಲಾ ನೋಂದಣಾಧಿಕಾರಿ ಇದ್ದು, ಅವರು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಕಛೇರಿಯಲ್ಲಿ ಅವರ ನೆರವಿಗೆ ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ಇದ್ದಾರೆ. ಉಡುಪಿ ನಗರ ವ್ಯಾಪ್ತಿಯ ಕೇಂದ್ರೀಯ ಉಪ ನೋಂದಣಾಧಿಕಾರಿಯಲ್ಲದೆ ಉಡುಪಿ, ಕಾರ್ಕಳ, ಕುಂದಾಪುರ, ಬ್ರಹ್ಮಾವರ, ಶಂಕರನಾರಾಯಣ ಹಾಗೂ ಬೈಂದೂರುಗಳಲ್ಲಿನ ಉಪನೋಂದಣಾಧಿಕಾರಿ ಕಛೇರಿಗಳು ಈ ಕಛೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ. ಭಾರತೀಯ ಪಾಲುದಾರಿಕೆ ಅಧಿನಿಯಮ, ಹಿಂದೂ ವಿವಾಹ ಕಾಯಿದೆ ಮೊದಲಾದ ನಿಯಮ, ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ

ಜಾನುವಾರುಗಳಿಗೆ ಸಾಂಕ್ರಾಮಿಕ ರೋಗ ತಗುಲದಂತೆ ಚುಚ್ಚುಮದ್ದು ನೀಡುವುದು, ರೋಗಗ್ರಸ್ಥ ಸಾಕುಪ್ರಾಣಿಗಳಿಗೆ ಚಿಕಿತ್ಸೆ ನೀಡುವುದು, ಮಿಶ್ರತಳಿಯ ಜಾನುವಾರುಗಳನ್ನು ಅಭಿವೃದ್ಧಿಪಡಿಸುವುದು, ಕಾರ್ಯಕ್ರಮಗಳ ಫಲಾನುಭವಿಗಳಿಗೆ ಸಹಾಯಧನ ಮಂಜೂರು ಹಾಗೂ ತಾಂತ್ರಿಕ ವಿಷಯಗಳಲ್ಲಿ

ಮಾರ್ಗದರ್ಶನ ನೀಡುವುದು ಮೊದಲಾದ ಧ್ಯೇಯೋದ್ದೇಶಗಳಿಂದ ಪಶುಪಾಲನಾ ಕಛೇರಿಯು ಉಡುಪಿಯಲ್ಲಿ ಆಗಸ್ಟ್ ೧೨, ೧೯೯೭ ರಿಂದ ಕಾರ್ಯನಿರ್ವಹಿಸುತ್ತಿದೆ. ೧೯೯೭ಕ್ಕೂ ಮೊದಲು (ಉಡುಪಿ ಜಿಲ್ಲೆಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಾಗ) ಈ ಕಛೇರಿಯು ಮಂಗಳೂರಿನಲ್ಲಿ ೧೯೬೬ ರಿಂದ ಕಾರ್ಯನಿರ್ವಹಿಸುತ್ತಿತ್ತು. ಈ ಕಛೇರಿಯ ಮುಖ್ಯಸ್ಥರ ಹುದ್ದೆಯ ಹೆಸರು ೧೯೬೬ರಲ್ಲಿ ಜಿಲ್ಲಾ ಪಶುಸಂಗೋಪನಾ ಅಧಿಕಾರಿ ಎಂದು ಇದ್ದು, ೧೯೭೨ ರಿಂದ ಹಿರಿಯ ಸಹಾಯಕ ನಿರ್ದೇಶಕ ಎಂತಲೂ ಹಾಗೂ ೧೯೮೬ ರಿಂದ ಉಪನಿರ್ದೇಶಕ ಎಂದು ಬದಲಾಗಿರುತ್ತದೆ. ಈ ಕಛೇರಿಯ ಕಾರ್ಯಗಳಲ್ಲಿ ಸಹಾಯಕ ನಿರ್ದೇಶಕರು ಪಶುವೈದ್ಯಾಧಿಕಾರಿಗಳು, ವಿಸ್ತರಣಾಧಿಕಾರಿ, ಪಶುವೈದ್ಯಕೀಯ ಮೇಲ್ವಿಚಾರಕರು ಮತ್ತಿತರ ಅಧಿಕಾರಿ, ಸಿಬ್ಬಂದಿ ವರ್ಗ ನೆರವಾಗುತ್ತಿದೆ.

ಜಿಲ್ಲಾ ವ್ಯಾಪ್ತಿ ಅಧಿಕಾರವನ್ನು ಹೊಂದಿದ ಈ ಕಛೇರಿಯು ಹಸಿರು ಮೇವು ಬೆಳೆಸಲು ರೈತರಿಗೆ ಪ್ರೋತ್ಸಾಹ ಹಾಗೂ ತಾಂತ್ರಿಕ ಸಲಹೆ ನೀಡುವುದು, ಮಿಶ್ರತಳಿ ಹಂದಿ ಸಾಕಾಣಿಕೆ, ಗಿರಿರಾಜ ಕೋಳಿ ಸರಬರಾಜು ಮೊದಲಾದ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿದೆ.

## ಪ್ರವಾಸೋದ್ಯಮ ಇಲಾಖೆ

ಜಿಲ್ಲೆಯಲ್ಲಿರುವ ಪ್ರವಾಸಿ ಸ್ಥಳಗಳನ್ನು ಗುರುತಿಸಿ, ಪ್ರವಾಸಿಗರ ಸಂಖ್ಯೆಗನುಗುಣವಾಗಿ ಮೂಲಭೂತ ಸೌಕರ್ಯ ಒದಗಿಸುವುದು, ಪ್ರವಾಸಿಗಳಿಗೆ ಅವುಗಳ ಬಗ್ಗೆ ಮಾಹಿತಿ ಒದಗಿಸುವುದು, ಪ್ರಚಾರ, ಸ್ಥಳೀಯ ಕಲಾ ಪರಂಪರೆಗೆ ಪ್ರೋತ್ಸಾಹ, ಖಾಸಗಿ ಉದ್ಯಮಿಗಳನ್ನು ಪ್ರವಾಸೋದ್ಯಮದಲ್ಲಿ ಪಾಲ್ಗೊಳ್ಳಲು ಉತ್ತೇಜನ ನೀಡುವುದೇ ಮತ್ತಿತರ ಧ್ಯೇಯೋದ್ದೇಶಗಳಿಂದ ಪ್ರವಾಸೋದ್ಯಮ ಇಲಾಖಾ ಕಛೇರಿಯು ಪ್ರಾದೇಶಿಕ ಪ್ರವಾಸಿ ಕಛೇರಿಯನ್ನು ೧೯೯೯ರಲ್ಲಿ ಪ್ರಾರಂಭಿಸಲಾಯಿತು. ಸಹಾಯಕ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದಾರೆ. ಸ್ವಾಗತಕಾರರು, ದ್ವಿತೀಯ ದರ್ಜೆ ಸಹಾಯಕ ಮತ್ತಿತರ ಸಿಬ್ಬಂದಿಯು ಕಛೇರಿ ಕಾರ್ಯದಲ್ಲಿ ಅವರಿಗೆ ನೆರವಾಗಿದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ನು ಸದರಿ ಕಛೇರಿಯು ತನ್ನ ಕಾರ್ಯಗಳಲ್ಲಿ ಅನುಸರಿಸುತ್ತದೆ. ರೂ.೪೦.೭೮ ಲಕ್ಷ ವೆಚ್ಚದಲ್ಲಿ ಮಲ್ಪೆ ಕಡಲತೀರದಲ್ಲಿ ಸಂಗೀತ ಕಾರಂಜಿ, ರೂ. ೨೫ ಲಕ್ಷ ವೆಚ್ಚದಲ್ಲಿ ಕೃಷ್ಣಾಮಠದಲ್ಲಿ ಯಾತ್ರಿನಿವಾಸ, ರೂ. ೫೦ಲಕ್ಷ ವೆಚ್ಚದಲ್ಲಿ ಪಾಜಕದಲ್ಲಿ ಯಾತ್ರಿನಿವಾಸ, ರೂ.೨.೮೦ಲಕ್ಷ ರೂ.ಗಳಲ್ಲಿ ಹಾರಾಡಿ ಕುಕ್ಕೆ ಕ್ಷೇತ್ರದಲ್ಲಿ ಕುಕ್ಕೆ ಕ್ಷೇತ್ರ ಅಭಿವೃದ್ಧಿ, ರೂ. ೪೦.೧೪ ಲಕ್ಷ ವೆಚ್ಚದಲ್ಲಿ ತ್ರಾಸಿಯಲ್ಲಿ (ಮರವಂತೆ) ಮರವಂತೆ ಕಡಲತೀರ ಅಭಿವೃದ್ಧಿ (ಸಂಗೀತ ಕಾರಂಜಿ), ರೂ. ೧೩.೧೩ಲಕ್ಷ ವೆಚ್ಚದಲ್ಲಿ ಕೊಲ್ಲೂರಿನಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ಮೊದಲಾದ ಕಾಮಗಾರಿಗಳನ್ನು ಕಾರ್ಯರೂಪಕ್ಕೆ ತಂದಿದೆ. ಆಯುಕ್ತರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

## ಪ್ರಾದೇಶಿಕ ಸಾರಿಗೆ ಕಛೇರಿ

ಉಡುಪಿಯಲ್ಲಿರುವ ಪ್ರಾದೇಶಿಕ ಸಾರಿಗೆ ಕಛೇರಿಯು ಉಡುಪಿ, ಕುಂದಾಪುರ ಹಾಗೂ ಕಾರ್ಕಳ ತಾಲೂಕುಗಳನ್ನು ತನ್ನ ಆಡಳಿತ ವ್ಯಾಪ್ತಿಯಲ್ಲಿ ಹೊಂದಿದೆ. ಮೋಟಾರು ವಾಹನಗಳ ತೆರಿಗೆ ಸಂಗ್ರಹಣೆ, ಮೋಟಾರು ವಾಹನಗಳ ಕಾಯ್ದೆ ಕಾನೂನುಗಳನ್ನು ಅನುಷ್ಠಾನಗೊಳಿಸುವುದು ಮೋಟಾರು ನೋಂದಣಿ, ರಹದಾರಿ ನೀಡಿಕೆ, ಅರ್ಹತಾ ಪತ್ರ, ಅನುಜ್ಞಾ ಪತ್ರಗಳ ನೀಡಿಕೆ ಈ ಕಛೇರಿಯ ಮುಖ್ಯ ಧ್ಯೇಯೋದ್ದೇಶಗಳಾಗಿವೆ. ರಸ್ತೆ ಸುರಕ್ಷತಾ ಸಪ್ತಾಹ, ವಾಯುಮಾಲಿನ್ಯ ಸಪ್ತಾಹ ಆಚರಣೆ, ಮೋಟಾರು ವಾಹನ ಇಲಾಖೆಗೆ ಸಂಬಂಧಿಸಿದ ಸಾರ್ವಜನಿಕ ಉಪಯುಕ್ತ ಕಾರ್ಯಕ್ರಮಗಳನ್ನು ನಡೆಸುವುದು ಮೊದಲಾದವು ಈ ಕಛೇರಿಯು ಹಮ್ಮಿಕೊಂಡಿರುವ ವಿವಿಧ ಅಭಿವೃದ್ಧಿ ಚಟುವಟಿಕೆಗಳಾಗಿವೆ. ಕೇಂದ್ರ ಮೋಟಾರು ವಾಹನ ಕಾಯ್ದೆ ೧೯೮೮, ಕೇಂದ್ರ ಮೋಟಾರು ವಾಹನಗಳ ನಿಯಮಗಳು ೧೯೮೯, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯಿದೆ ಹಾಗೂ ನಿಯಮಗಳು ೧೯೫೭ ಮೊದಲಾದ ನಿಯಮ, ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯಗಳಲ್ಲಿ ಅನುಸರಿಸುತ್ತಿದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿ ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಸಹಾಯಕ ಪ್ರಾದೇಶಿಕ ಅಧಿಕಾರಿ, ಹಿರಿಯ ಮೋಟಾರು ವಾಹನ ನಿಬಂಧಕರು, ಮೋಟಾರು ವಾಹನ ನಿಬಂಧಕರು, ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ಇವರ ಸಹಾಯಕ್ಕಿರುತ್ತಾರೆ. ಉಡುಪಿ ಪ್ರಾದೇಶಿಕ ಸಾರಿಗೆ ಕಛೇರಿಯ ಅಧೀನದಲ್ಲಿ ತಾಲೂಕು ಮಟ್ಟದ ಉಪ ಕಛೇರಿಗಳು ಇರುವುದಿಲ್ಲ. ಉಪಸಾರಿಗೆ ಆಯುಕ್ತರು, ಶಿವಮೊಗ್ಗ ವಿಭಾಗ, ಶಿವಮೊಗ್ಗ ಅವರು ಮೇಲಧಿಕಾರಿಯಾಗಿರುತ್ತಾರೆ.

## ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ರಾಜ್ಯಗಳ ಪುನರ್ ರಚನೆ (ನವೆಂಬರ್ ೧೯೫೬ರಲ್ಲಿ)ಗೆ ಮೊದಲು ಬಂದರು ಟ್ರಸ್ಟ್ (ವಿಶ್ವಸ್ಥ ಸಮಿತಿ) ಮಂಗಳೂರು ಎಂಬ ಹೆಸರಿನಲ್ಲಿದ್ದ ಈ ಕಛೇರಿಯು ೧೯೮೦ರಲ್ಲಿ ರಾಜ್ಯ ಸರ್ಕಾರದ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಸೇರಿದ ಮೇಲೆ ಬಂದರು ಕಛೇರಿ (ವಿಭಜನಾ ಪೂರ್ವದಲ್ಲಿ) ಹೆಸರಿನಲ್ಲಿ ಮಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಬಂದರು ಸಂರಕ್ಷಣಾಧಿಕಾರಿ ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಈ ಹಿಂದೆ ಈ ಕಛೇರಿಯು ಬಂದರು ಸಹಾಯಕ ಸಂರಕ್ಷಣಾಧಿಕಾರಿ ಕಛೇರಿಯಾಗಿದ್ದು, ೨೦೦೩ರ ಅಕ್ಟೋಬರಿನಲ್ಲಿ ಬಂದರು ಸಂರಕ್ಷಣಾಧಿಕಾರಿ ಕಛೇರಿಯಾಗಿ ಮೇಲ್ದರ್ಜೆಗೆ ಏರಿಸಲಾಯಿತು. ಬಂದರಿನಲ್ಲಿ ನಡೆಯುವ ಆಮದು-ರಫ್ತುಗಳ ನಿರ್ವಹಣೆ, ಬಂದರು ಭೂಮಿಗಳ ನಿರ್ವಹಣೆ ಮತ್ತು ಮೀನುಗಾರಿಕಾ ನೌಕೆಗಳ ನೋಂದಣಿ ಕಾರ್ಯಗಳನ್ನು ಈ ಕಛೇರಿಯು ನಿರ್ವಹಿಸುತ್ತಿದೆ. ಹಂಗಾರಕಟ್ಟೆಯಲ್ಲಿ ಸಹಾಯಕ ಬಂದರು ಸಂರಕ್ಷಣಾಧಿಕಾರಿ ಕರ್ತವ್ಯನಿರತರಾಗಿದ್ದಾರೆ. ಅಲ್ಲದೆ ದೀಪಪಾಲಕ, ಸಹಾಯಕ ದೀಪಪಾಲಕ, ಸಂಕೇತಕ, ನಾವಿಕ, ಧಕ್ಕೆ ನಾವಿಕ ಮತ್ತಿತರ ಸಿಬ್ಬಂದಿ ಅವರಿಗೆ ಆಡಳಿತದಲ್ಲಿ ನೆರವಾಗಿದ್ದಾರೆ. ಕಾರ್ಯನಿರ್ವಾಹಕ ಅಭಿಯಂತರರು ಬಂದರು ಮತ್ತು ಮೀನುಗಾರಿಕೆ ವಿಭಾಗ ಉಡುಪಿ ಅವರು ಕಾರ್ಯನಿರ್ವಹಿಸುತ್ತಿದ್ದು, ಅವರ ಅಧೀನದಲ್ಲಿ ಬಂದರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬಂದರು ಮತ್ತು ಮೀನುಗಾರಿಕಾ ಉಪ ವಿಭಾಗ ಉಡುಪಿ ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ಭಾರತೀಯ ಬಂದರು ಅಧಿನಿಯಮ ೧೯೦೮, ಮರ್ಚೆಂಟ್ ಶಿಪ್ಪಿಂಗ್ ಆ್ಯಕ್ಟ್ ೧೯೫೮ ಹಾಗೂ ಕರ್ನಾಟಕ ಲ್ಯಾಂಡ್ಗಿಗ್ ಮತ್ತು ಶಿಪ್ಪಿಂಗ್ ನಿಯಮ ೧೯೬೪ ಮೊದಲಾದ ನಿಯಮ, ಅದಿನಿಯಮಗಳನ್ನು ಈ ಇಲಾಖೆ ತನ್ನ ಕೆಲಸಗಳಲ್ಲಿ ಅನುಸರಿಸುತ್ತದೆ. ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕಾರವಾರ ಅವರು ಮೇಲಧಿಕಾರಿಗಳಾಗಿರುತ್ತಾರೆ.

## ಮಲ್ಪೆ ಮತ್ತು ಹೊನ್ನಾವರ ಮೀನುಗಾರಿಕೆ ಬಂದರುಗಳ ಯೋಜನೆ

ಮೀನುಗಾರಿಕಾ ಬೋಟುಗಳು, ಹಾಯಿದೋಣಿಗಳು ಮತ್ತು ಮಂಜಿಗಳ ನೋಂದಣಿ ಮಾಡುವುದು, ಮಂಜಿಗಳು ಮತ್ತು ಹಡಗುಗಳ ಮೂಲಕ ಲಕ್ಷದ್ವೀಪ, ಮಿನಿಕಾರ್ಯ ಮತ್ತಿತರ ದ್ವೀಪಗಳಿಗೆ ಸರಕುಗಳ ಆಮದು, ರಫ್ತುಗಳಿಗೆ ಅವಕಾಶ ಮತ್ತು ಮಾಡಿಕೊಡುವುದು, ದ್ವೀಪಗಳಲ್ಲಿನ ಜನರು ಸಂಚಾರಕ್ಕೆ ಪ್ರಯಾಣಿಕರ ಹಡುಗುಗಳ ವ್ಯವಸ್ಥೆ ಮಾಡುವುದು ಮೊದಲಾದ ಕಾರ್ಯಗಳೊಂದಿಗೆ ದಿನಾಂಕ ೨೨-೦೭-೧೯೭೫ರಲ್ಲಿ ಈ ಕಛೇರಿಯು ಪ್ರಾರಂಭಗೊಂಡಿತು. ಯೋಜನಾ ಸಮನ್ವಯಾಧಿಕಾರಿರವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಉಡುಪಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡದ ಮೀನುಗಾರಿಕಾ ಬಂದರುಗಳಾದ ಮಲ್ಪೆ, ಮಂಗಳೂರು, ಗಂಗೊಳ್ಳಿ ಮತ್ತು ಹೊನ್ನಾವರ ಬಂದರುಗಳು ಈ ಕಛೇರಿಯ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಪ್ರಥಮ ದರ್ಜೆ ಸಹಾಯಕ, ದ್ವಿತೀಯ ದರ್ಜೆ ಸಹಾಯಕ, ಶೀಘ್ರಲಿಪಿಗಾರ ಮತ್ತಿತರ ಸಿಬ್ಬಂದಿ ವರ್ಗ ಇವರ ಸಹಾಯಕ್ಕಿರುತ್ತಾರೆ.

ಮೀನುಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಮೀನುಗಾರರ ಸಮುದಾಯದ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯ ವಲಯ ಯೋಜನೆಯಡಿಯಲ್ಲಿ ಮಲ್ಪೆ, ಮಂಗಳೂರು ಮತ್ತು ಹೊನ್ನಾವರ ಮೀನುಗಾರಿಕಾ ಬಂದರುಗಳಲ್ಲಿ ನೀರಿನ ಮತ್ತು ವಿದ್ಯುತ್ ದ್ವೀಪದ ವ್ಯವಸ್ಥೆ, ರಸ್ತೆಗಳು, ಕಾಂಕ್ರೀಟೀಕರಣ, ಶೌಚಾಲಯ, ಕಟ್ಟಡ ನಿರ್ಮಾಣ ಮತ್ತು ದುರಸ್ತಿ ಇತ್ಯಾದಿಗಳ ಬಗ್ಗೆ ನಿರ್ವಹಣೆ ಹಾಗೂ ಬಂದರುಗಳಲ್ಲಿ

ವಿವಿಧ ರೀತಿಯ ಶುಲ್ಕ ವಸೂಲಾತಿ, ಬಂದರಿನ ಶುಚಿತ್ವ ನಿರ್ವಹಣೆ ಮೊದಲಾದವು. ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಬಂದರು ವಿಸ್ತರಣೆ, ಜೆಟ್ಟಿಗಳ ನಿರ್ಮಾಣ ಮತ್ತಿತರ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುತ್ತಿದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಮತ್ತಿತರ ನಿಯಮ ಅಧಿನಿಯಮಗಳನ್ನು ತನ್ನ ಕಛೇರಿ ಕೆಲಸಕ್ಕೆ ಅನ್ವಯಗೊಳಿಸಿಕೊಳ್ಳುತ್ತಿದೆ. ಮೀನುಗಾರಿಕಾ ನಿರ್ದೇಶಕರು, ಬೆಂಗಳೂರು ಇವರು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಸ್ತ್ರೀಶಕ್ತಿ ಯೋಜನೆ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸುವುದು. ಮತ್ತಿತರ ಧ್ಯೇಯೋದ್ದೇಶಗಳೊಂದಿಗೆ ಉಡುಪಿಯಲ್ಲಿ ೧೯೭೮ರಲ್ಲಿ ಈ ಇಲಾಖೆಯು ಪ್ರಾರಂಭಗೊಂಡಿತು. ಜಿಲ್ಲಾ ವಿಭಜನೆಗೆ ಮೊದಲು, ಈ ಕಛೇರಿಯು ೧೯೮೧ ರಿಂದಲೇ ಕಾರ್ಯನಿರ್ವಹಿಸುತ್ತಿತ್ತು. ಈ ಕಛೇರಿಯ ಆಗಿನ (೧೯೮೧ರಲ್ಲಿ) ಮುಖ್ಯಸ್ಥರ ಹುದ್ದೆಯು ಸಹಾಯಕ ನಿರ್ದೇಶಕ ಎಂದು ಇದ್ದದ್ದು, ೨೦೦೩ ರಿಂದ ಉಪನಿರ್ದೇಶಕ ಎಂದು ಬದಲಾವಣೆ ಹೊಂದಿರುತ್ತದೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಈ ಕಛೇರಿಯಲ್ಲಿ ಉಪನಿರ್ದೇಶಕರೊಂದಿಗೆ ಮಹಿಳಾ ಮತ್ತು ಮಕ್ಕಳ ಅಧಿಕಾರಿ, ಜಿಲ್ಲಾ ನಿರೂಪಣಾಧಿಕಾರಿ, ಅಧೀಕ್ಷಕರು, ಪೌಷ್ಟಿಕ ಆಹಾರ ನಿರೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ಇನ್‌ಸ್ಟ್ರಕ್ಟರ್ ಮತ್ತಿತರ ಅಧಿಕಾರಿ, ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಪರಿವೀಕ್ಷಣಾಧಿಕಾರಿ ಜಿಲ್ಲಾ ಪರಿವೀಕ್ಷಣಾ ಅಧಿನಿಯಮ ಉಡುಪಿ ಇವರು ಜಿಲ್ಲಾ ಮಟ್ಟದ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಉಡುಪಿ, ಕುಂದಾಪುರ ಹಾಗೂ ಕಾರ್ಕಳಗಳಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿದ್ದು, ಆಯಾ ತಾಲೂಕುಗಳ ವ್ಯಾಪ್ತಿಯಲ್ಲಿ ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ಬಾಲಕಿಯರ ಬಾಲಮಂದಿರ ಉಡುಪಿ, ಸ್ತ್ರೀ ಸೇವಾ ನಿಕೇತನ ಹಾಗೂ ಬಾಲಕರ ಬಾಲಮಂದಿರ (ವೀಕ್ಷಣಾಲಯ) ಉಡುಪಿಯಲ್ಲಿದ್ದು, ಇದರ ಮುಖ್ಯಸ್ಥರ ಅಧಿಕಾರ ವ್ಯಾಪ್ತಿ ಆಯಾ ಸಂಸ್ಥೆಗೆ ಸೀಮಿತಗೊಂಡಿರುತ್ತದೆ. ಸುಸಂಘಟಿತ ಶಿಶು ಅಭಿವೃದ್ಧಿ ಯೋಜನೆ, ಪೂರಕ ಪೌಷ್ಠಿಕ ಆಹಾರ ಯೋಜನೆ, ಬಾಲಿಕಾ ಸಮೃದ್ಧಿ ಯೋಜನೆ, ಸ್ತ್ರೀಶಕ್ತಿ ಯೋಜನೆ, ಸುಧಾರಣಾ ಸಂಸ್ಥೆಗಳ ಅನುಷ್ಠಾನ, ನಮ್ಮ ಮಗಳು, ನಮ್ಮ ಶಕ್ತಿ ಯೋಜನೆ, ಉದ್ಯೋಗಿನಿ ಮಾರುಕಟ್ಟೆ ಸಹಾಯ ಯೋಜನೆ, ಗ್ರಾಮೀಣ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವ ಯೋಜನೆ, ವಿಧವೆಯರ, ದೇವದಾಸಿ ಮತ್ತು ಸಂಸ್ಥೆಯ ನಿವಾಸಿಗಳ ವಿವಾಹ ಯೋಜನೆ ಮತ್ತಿತರ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಈ ಇಲಾಖೆಯು ಜಾರಿಗೆ ತಂದಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಜೆ. ಜೆ. ಆಕ್ಟ್ ೨೦೦೦, ಪಿ.ಐ.ಟಿ (ಎಸ್) ಆಕ್ಟ್, ವರದಕ್ಷಿಣೆ ನಿಷೇಧ ಕಾಯಿದೆ, ಐ.ಸಿ.ಡಿ.ಎಸ್. ಮ್ಯಾನುವಲ್, ಪಿ.ಒ.ಪಿ.ಒ ಆ್ಯಕ್ಟ್ ಹಾಗೂ ಒ.ಸಿ.ಹೆಚ್ ಆಕ್ಟ್‌ಗಳನ್ನು ತನ್ನ ಕಛೇರಿಗಳ ಕೆಲಸಗಳಲ್ಲಿ ಅನುಸರಿಸುತ್ತಿದೆ. ಆಯುಕ್ತರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ.

## ಮೀನುಗಾರಿಕೆ ಇಲಾಖೆ

ಮಂಗಳೂರಿನಲ್ಲಿರುವ ಮೀನುಗಾರಿಕೆ ಉಪನಿರ್ದೇಶಕರ ಕಛೇರಿಯು ವಿಭಾಗ ಮಟ್ಟದ್ದಾಗಿದ್ದು, ದಕ್ಷಿಣ ಕನ್ನಡ ಮತ್ತು ಉಡುಪಿ ಈ ಎರಡೂ ಜಿಲ್ಲೆಗಳ ಅಧಿಕಾರ ವ್ಯಾಪ್ತಿ ಹೊಂದಿರುತ್ತದೆ. ಉಪನಿರ್ದೇಶಕರಿಗೆ ಕಛೇರಿ ಕಾರ್ಯಗಳಲ್ಲಿ ನೆರವಾಗಲು ಆಡಳಿತ ಮತ್ತು ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿ ಮೀನುಗಾರಿಕೆ ಸಹಾಯಕ ನಿರ್ದೇಶಕರು, ಅಧೀಕ್ಷಕರು, ಸಹಾಯಕ ಸಾಂಖ್ಯಿಕ ಅಧಿಕಾರಿ, ಪ್ರಥಮ ದರ್ಜೆ ಸಹಾಯಕ ಮೊದಲಾದ ಅಧಿಕಾರಿ, ಸಿಬ್ಬಂದಿಗಳಿದ್ದಾರೆ. ಜಿಲ್ಲಾ ಹಾಗೂ ವಲಯ ಮಟ್ಟದಲ್ಲಿ ಮೀನುಗಾರ ಸಮುದಾಯದ ಅಭಿವೃದ್ಧಿ, ಮೀನುಗಾರಿಕೆಗೆ ಸಂಬಂಧಿಸಿದ ವಿವಿಧ ಅಭಿವೃದ್ಧಿ ಕಾರ್ಯಗಳ ಅನುಷ್ಠಾನದ ಉಸ್ತುವಾರಿ ಹಾಗೂ ಆಡಳಿತ ನಿಯಂತ್ರಣವು ಈ ಕಛೇರಿಯ ಪ್ರಮುಖ ಧ್ಯೇಯೋದ್ದೇಶವಾಗಿದ್ದು, ಅದಕ್ಕೆ ಪೂರಕವಾಗಿ ಮೀನುಮರಿ ಪಾಲನೆ ಮತ್ತು ಹಂಚಿಕೆ, ಮೀನು ಮಾರುಕಟ್ಟೆ ನಿರ್ಮಾಣಕ್ಕೆ ಸಹಾಯಧನ ನೀಡಿಕೆ, ಸಿಗಡಿ

ಕೃಷಿ ಅಭಿವೃದ್ಧಿಗೆ ನೆರವು ಮೊದಲಾದ ಜಿಲ್ಲಾ ವಲಯ ಯೋಜನೆಗಳು, ಮೀನುಗಾರರಿಗೆ ಮನೆಗಳ ನಿರ್ಮಿತಿಗಾಗಿ ಮತ್ಸ್ಯಾಶ್ರಯ ಯೋಜನೆಯಡಿ ಸಹಾಯಧನ ನೀಡಿಕೆ, ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ ಡೀಸಲ್ ಮೇಲಿನ ರಾಜ್ಯ ಮಾರಾಟ ಕರ ಮಾಫಿ ಮೊದಲಾದ ರಾಜ್ಯ ವಲಯ ಯೋಜನೆಗಳು, ಸಾಂಪ್ರದಾಯಿಕ ನಾಡದೋಣಿಗಳನ್ನು ಯಾಂತ್ರೀಕರಿಸಲು ಸಹಾಯಧನ, ಮೀನುಗಾರರ ಅಪಘಾತ ಗುಂಪು ವಿಮಾ ಯೋಜನೆ ಮೊದಲಾದ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಈ ಕಛೇರಿಯು ಕಾರ್ಯರೂಪಕ್ಕೆ ತರುತ್ತಿದೆ. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ರೇಷ್ಮೆ ಇಲಾಖೆ

ಜಿಲ್ಲೆಯಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿಪಡಿಸಲು ರೇಷ್ಮೆ ಬೆಳೆಗಾರರಿಗೆ ಹೊಸ ತಾಂತ್ರಿಕತೆಗಳ ಬಗ್ಗೆ ಮಾಹಿತಿ ನೀಡುವುದರ ಮೂಲಕ ಉತ್ತಮ ಗುಣಮಟ್ಟದ ಅಧಿಕ ಇಳುವರಿ ಪಡೆಯುವಂತೆ ಮಾಡಲು ಕಾರ್ಯಕ್ರಮಗಳನ್ನು ರೂಪಿಸುವುದು, ಹಿಪ್ಪು ನೇರಳೆ ತೋಟಗಳ ವಿಸ್ತರಣೆ, ರೋಗರಹಿತ ಮೊಟ್ಟೆಗಳ ಪೂರೈಕೆ, ರೈತರಿಗೆ ಹೊಸ ತಳಿಗಳನ್ನು ಪರಿಚಯಿಸುವುದು ಮತ್ತು ತರಬೇತಿ ನೀಡುವುದು ಹಾಗೂ ರೈತರಿಗೆ ಅನುಕೂಲವಾಗುವ ಕ್ರಿಯಾ ಯೋಜನೆ ರೂಪಿಸುವುದು ಮುಂತಾದ ಉದ್ದೇಶಗಳೊಂದಿಗೆ ಜುಲೈ ೨೦೦೦ದಲ್ಲಿ ಈ ಇಲಾಖೆಯನ್ನು ಪ್ರಾರಂಭಿಸಲಾಗಿದೆ. ಅದಕ್ಕೂ ಮೊದಲು ಈ ಜಿಲ್ಲೆಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಾಗ ಈ ಇಲಾಖೆಯು ೧೯೮೦ರಲ್ಲೆ ಆರಂಭಗೊಂಡಿತ್ತು. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಉಪ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರ ನೆರವಿಗೆ ರೇಷ್ಮೆ ಸಹಾಯ ನಿರ್ದೇಶಕರು, ಅಧೀಕ್ಷಕರು, ರೇಷ್ಮೆ ನಿರೀಕ್ಷಕರು, ಮೊದಲಾದ ಸಿಬ್ಬಂದಿ ಇದ್ದಾರೆ. ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿ ಕಾರ್ಕಳ (ರೇಷ್ಮೆ ಸಹಾಯಕ ನಿರ್ದೇಶಕರು) ತಾಂತ್ರಿಕ ಸೇವಾ ಕೇಂದ್ರ, ಕುಂದಾಪುರ (ರೇಷ್ಮೆ ವಿಸ್ತರಣಾಧಿಕಾರಿಗಳು) ಹಾಗೂ ರೇಷ್ಮೆ ವಿಸ್ತರಣಾ ಕೇಂದ್ರ ಉಡುಪಿ (ರೇಷ್ಮೆ ಪ್ರಚಾರಾಧಿಕಾರಿ) ಈ ಕಛೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಲೂಕು ಅಥವಾ ಇತರೆ ಹಂತಗಳ ಕಛೇರಿಗಳಾಗಿವೆ. ಆವರಣದಲ್ಲಿರುವ ಉಲ್ಲೇಖ ಆಯಾ ಕಛೇರಿಯ ಮುಖ್ಯಸ್ಥರದ್ದಾಗಿದೆ. ರೇಷ್ಮೆ ಜಂಟಿ ನಿರ್ದೇಶಕರು, ಮೈಸೂರು ಅವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ. ಈ ಕಛೇರಿಯು ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಕೆ.ಸಿ.ಎಸ್.ಆರ್.ಎಸ್), ಪಾರದರ್ಶಕ ಅಧಿನಿಯಮ ಹಾಗೂ ಮಾಹಿತಿ ಹಕ್ಕು ನಿಯಮ ಮತ್ತಿತರ ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತದೆ.

## ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ ಹಾಗೂ ಕಾರ್ಯಪಾಲಕ ಇಂಜನಿಯರ್, ರಾಜ್ಯ ಹೆದ್ದಾರಿ ಮತ್ತು ಮುಖ್ಯ ಜಿಲ್ಲಾ ರಸ್ತೆಗಳು ವಿಭಾಗ ಸೇರಿ ಪೂರ್ಣಮಟ್ಟದ ಲೋಕೋಪಯೋಗಿ ಇಲಾಖೆಯಾಗುತ್ತದೆ.

**ರಾಷ್ಟ್ರೀಯ ಹೆದ್ದಾರಿ ವಿಭಾಗ :** ಈ ಕಛೇರಿಯು ಮಂಗಳೂರಿನಲ್ಲಿ ೧೯೮೦ರಲ್ಲಿ ಆರಂಭಗೊಂಡಿತು. ಇದು ರಾಷ್ಟ್ರೀಯ ಹೆದ್ದಾರಿ ೧೩, ರಾಷ್ಟ್ರೀಯ ಹೆದ್ದಾರಿ ೧೭, ರಾಷ್ಟ್ರೀಯ ಹೆದ್ದಾರಿ ೪೮ ಹಾಗೂ ರಾಷ್ಟ್ರೀಯ ಹೆದ್ದಾರಿ ೨೦೬ರಲ್ಲಿ ಬರುವ ಮೂಲ ಕಾಮಗಾರಿ, ಸಿ.ಆರ್.ಎಫ್ ಕಾಮಗಾರಿ, ಐ.ಆರ್.ಕ್ಯೂ.ಪಿ ಕಾಮಗಾರಿ, ನಿಯತಕಾಲಿಕ ಕಾಮಗಾರಿಗಳನ್ನು ನಿರ್ವಹಣೆ ಮಾಡುವುದು ಹಾಗೂ ಸದರಿ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿ ಇರುವಂತೆ ನೋಡಿಕೊಳ್ಳುವುದು ಈ ಕಛೇರಿಯ ಮುಖ್ಯ ಉದ್ದೇಶವಾಗಿದೆ. ಕಾರ್ಯಪಾಲಕ ಇಂಜನೀಯರ್ ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರ ನೆರವಿಗೆ ಸಹಾಯಕ ಇಂಜನಿಯರ್, ಕಿರಿಯ ಇಂಜನಿಯರ್, ಕಛೇರಿ ಅಧೀಕ್ಷಕರು, ಲೆಕ್ಕ ಪರಿಶೋಧನಾಧಿಕಾರಿ, ಪ್ರಥಮ ದರ್ಜೆ ಲೆಕ್ಕ ಸಹಾಯಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಪ್ರಥಮ ದರ್ಜೆ ಭೂಮಾಪಕರು ಮತ್ತಿತರ ಅಧಿಕಾರಿ ಸಿಬ್ಬಂದಿಗಳು ಇದ್ದಾರೆ. ಕರ್ನಾಟಕ ನಾಗರೀಕ

ಸೇವಾ ನಿಯಮಗಳು, ಸಾರ್ವಜನಿಕ ಮಾಹಿತಿ ಹಕ್ಕು ಅಧಿನಿಯಮಗಳು ೨೦೦೫ ಮತ್ತಿತರ ನಿಯಮ ಅಧಿನಿಯಮಗಳನ್ನು ತನ್ನ ಕಛೇರಿ ಕೆಲಸದಲ್ಲಿ ಅನುಸರಿಸುತ್ತಿದೆ. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಉಪ–ವಿಭಾಗ, ಮಂಗಳೂರು, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಉಪ–ವಿಭಾಗ, ಕುಂದಾಪುರ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಉಪ–ವಿಭಾಗ, ಹಾಸನ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಉಪ–ವಿಭಾಗ, ಚನ್ನರಾಯಪಟ್ಟಣ. ಈ ನಾಲ್ಕು ಉಪವಿಭಾಗೀಯ ಕಛೇರಿಗಳು ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ.

**ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆ ವಿಭಾಗ:** ಈ ಕಛೇರಿಯು ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಬರುವ ಕಾಮಗಾರಿಗಳ ನಿರ್ವಹಣೆ ಹಾಗೂ ರಸ್ತೆಗಳನ್ನು ವಾಹನ ಸಂಚಾರಕ್ಕೆ ಯೋಗ್ಯವಾಗಿರುವಂತೆ ನೋಡಿಕೊಳ್ಳುವುದು, ನಬಾರ್ಡ್ ಕಾಮಗಾರಿಗಳ ಅನುಷ್ಠಾನ, ಕಟ್ಟಡ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ, ಸೇತುವೆಗಳ ನಿರ್ಮಾಣ, ಮೋರಿ ದುರಸ್ತಿ ಮತ್ತಿತರ ಧ್ಯೇಯೋದ್ದೇಶ ಹಾಗೂ ಕಾರ್ಯ ಚಟುವಟಿಕೆಗಳೊಂದಿಗೆ ಕಾರ್ಯಪಾಲಕ ಇಂಜಿನಿಯರ್‌ರವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರ ನೆರವಿಗೆ ತಾಂತ್ರಿಕ ಸಹಾಯಕರು, ಸಹಾಯಕ ಇಂಜಿನಿಯರ್‌ಗಳು ಕಿರಿಯ ಇಂಜಿನಿಯರ್‌ಗಳು, ಅಧೀಕ್ಷಕರು, ಲೆಕ್ಕ ಪರಿಶೋಧನಾಧಿಕಾರಿಗಳು, ಪ್ರಥಮ ದರ್ಜೆ ಲೆಕ್ಕ ಸಹಾಯಕರು ಮತ್ತಿತರ ಅಧಿಕಾರಿ ಸಿಬ್ಬಂದಿಗಳು ಇದ್ದಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಹೊಂದಿಕೊಂಡಂತೆ ಸಿ.ಸಿ.ಎ. ನಿಯಮಗಳು, ಸಾರ್ವಜನಿಕ ಮಾಹಿತಿ ಹಕ್ಕು ಅಧಿನಿಯಮ–೨೦೦೫ ಮೊದಲಾದ ನಿಯಮಗಳನ್ನು ತನ್ನ ಕಛೇರಿ ಕೆಲಸದಲ್ಲಿ ಅನುಸರಿಸುತ್ತಿದೆ. ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಒಂದನೇ ಉಪವಿಭಾಗ, ಉಡುಪಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎರಡನೇ ಉಪವಿಭಾಗ ಕುಂದಾಪುರ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮೂರನೇ ಉಪವಿಭಾಗ, ಕಾರ್ಕಳ ಇವು ಈ ಕಛೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ. ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮಂಗಳೂರು ವೃತ್ತ, ಮಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ. ಅಧೀಕ್ಷಕ ಇಂಜನಿಯರ್, ರಾಷ್ಟ್ರೀಯ ಹೆದ್ದಾರಿ ವೃತ್ತ, ಬೆಂಗಳೂರು ಅವರು ಕೇಂದ್ರೀಯ ಮೇಲಧಿಕಾರಿಯಾಗಿರುತ್ತಾರೆ.

## ವಾರ್ತಾ ಇಲಾಖೆ

ಈ ಇಲಾಖೆಯು ಜಿಲ್ಲೆಯಲ್ಲಿ ೧೯೯೭ರಲ್ಲಿ ಆರಂಭಗೊಂಡಿದ್ದು, ಹಿರಿಯ ಸಹಾಯಕ ನಿರ್ದೇಶಕರು, ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಇದಕ್ಕೂ ಮೊದಲು ಜೂನ್ ೧೯೬೨ ರಿಂದಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕಛೇರಿಯು ಕಾರ್ಯನಿರ್ವಹಿಸುತ್ತಿತ್ತು. ಅವರಿಗೆ ಪ್ರಥಮ ದರ್ಜೆ ಸಹಾಯಕರು, ಸಿನಿ ಚಾಲಕರು ಮೊದಲಾದ ಸಿಬ್ಬಂದಿಗಳು ಆಡಳಿತದಲ್ಲಿ ನೆರವಾಗಿದ್ದಾರೆ. ಸರ್ಕಾರದ ಪ್ರಗತಿಪರ ಕಾರ್ಯಕ್ರಮಗಳು, ಯೋಜನೆಗಳು ಹಾಗೂ ಸಾಧನೆಗಳನ್ನು ದೃಶ್ಯ–ಶ್ರವಣ ಮತ್ತಿತರ ಮಾಧ್ಯಮಗಳ ಮೂಲಕ ಸಾರ್ವಜನಿಕರಿಗೆ ಆಕರ್ಷಕವಾಗಿ ಪ್ರಚುರಪಡಿಸುವುದು, ಸಾಮಾಜಿಕ ಅರಿವಿನ ಬಗ್ಗೆ ಜಾಗೃತಿ ಉಂಟುಮಾಡುವುದು. ಸಾರ್ವಜನಿಕರು ಹಾಗೂ ಸರ್ಕಾರದ ನಡುವೆ ಸಂಪರ್ಕ ಕೊಂಡಿಯಾಗಿ ಕೆಲಸ ಮಾಡುವುದು. ಈ ಕಛೇರಿಯ ಮುಖ್ಯ ಉದ್ದೇಶವಾಗಿರುತ್ತದೆ. ಇದಕ್ಕಾಗಿ ಗ್ರಾಮ ಸಂಪರ್ಕ, ವಿಚಾರಗೋಷ್ಠಿ, ವಸ್ತು ಪ್ರದರ್ಶನ, ಚಲನಚಿತ್ರ ಪ್ರದರ್ಶನ ಮೊದಲಾದ ಕಾರ್ಯಕ್ರಮಗಳನ್ನೇರ್ಪಡಿಸುವುದು, ಸರ್ಕಾರದ ಪ್ರಗತಿಪರ ಯೋಜನೆಗಳು, ಅಭಿವೃದ್ಧಿ ಕಾರ್ಯಗಳ ಬಗ್ಗೆ ಪತ್ರಿಕೆ ಮತ್ತಿತರ ಸಮೂಹ, ಮಾಧ್ಯಮಗಳಿಗೆ ಸುದ್ದಿ ನೀಡುವುದು, ಕ್ಲಿಪಿಂಗ್ಸ್ ಮೂಲಕ ಜನತೆಯ ಕುಂದುಕೊರತೆಗಳನ್ನು ಸರ್ಕಾರದ ಗಮನಕ್ಕೆ ತರುವುದು ಮೊದಲಾದ ಕಾರ್ಯಕ್ರಮಗಳನ್ನು ಈ ಇಲಾಖೆಯು ನಿರ್ವಹಿಸುತ್ತಿದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ಉಪನಿರ್ದೇಶಕರು, ವಾರ್ತಾ ಇಲಾಖೆ, ಮೈಸೂರು ಇವರು ತತ್‌ಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

## ಸಣ್ಣ ಉಳಿತಾಯ ಯೋಜನೆ ಇಲಾಖೆ

ಸಾರ್ವಜನಿಕರಲ್ಲಿ ಉಳಿತಾಯದ ಮನೋಭಾವವನ್ನು ಬೆಳೆಸುವದು ಇತರೆ ಇಲಾಖೆಯ ಅಧಿಕಾರಿಗಳಿಗೆ ಸಣ್ಣ ಉಳಿತಾಯ ಸಂಗ್ರಹಣಾ ಕಾರ್ಯದಲ್ಲಿ ಸಹಾಯಕರಾಗುವುದು, ಅರ್ಹ ನಿರುದ್ಯೋಗಿಗಳನ್ನು ಗುರುತಿಸಿ, ಅವರುಗಳ ಏಜೆನ್ಸಿ ಪಡೆದು ಸಣ್ಣ ಉಳಿತಾಯ ಸಂಗ್ರಹಣೆಗೆ ಸಹಾಯಕರಾಗಿ ಆ ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತೆ ಪ್ರೇರೆಪಿಸುವುದು ಮತ್ತಿತರ ಉದ್ದೇಶಗಳೊಂದಿಗೆ ಈ ಕಛೇರಿಯು ಉಡುಪಿಯಲ್ಲಿ ೧೯೬೮ರಲ್ಲಿ ಆರಂಭಗೊಂಡಿತು. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವ ಈ ಕಛೇರಿಗೆ ಸಹಾಯಕ ನಿರ್ದೇಶಕರು ಮುಖ್ಯಸ್ಥರಾಗಿದ್ದು, ಅವರ ನೆರವಿಗೆ ಒಬ್ಬ ಅಭಿವೃದ್ಧಿ ಅಧಿಕಾರಿ ಸೇರಿದಂತೆ ಒಟ್ಟು ಏಳು ಮಂದಿ ಇತರೆ ಸಿಬ್ಬಂದಿ ಇದ್ದಾರೆ. ಉಡುಪಿ ತಾಲೂಕು ಅಭಿವೃದ್ಧಿ ಅಧಿಕಾರಿ, ಸಹಾಯಕ ನಿರ್ದೇಶಕರ ಕಛೇರಿ ಉಡುಪಿ, ಸಹಾಯಕ ಅಭಿವೃದ್ಧಿ ಅಧಿಕಾರಿ, ಕುಂದಾಪುರ ತಾ॥ ಹಾಗೂ ಕಾರ್ಕಳ ತಾ॥ ಇವು ಈ ಕಛೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ. ಕೆ.ಸಿ.ಎಸ್.ಆರ್., ಕೆ.ಎಫ್.ಸಿ., ಮತ್ತಿತರ ಸೇವಾ ನಿಯಮಗಳನ್ನು ಈ ಕಛೇರಿಯು ಅನುಸರಿಸುತ್ತದೆ. ನಿರ್ದೇಶಕ ಸಣ್ಣ ಉಳಿತಾಯ ಹಾಗೂ ಲಾಟರಿ ನಿರ್ದೇಶನಾಲಯ, ಬೆಂಗಳೂರು ಅವರು ಮೇಲಧಿಕಾರಿಯಾಗಿದ್ದಾರೆ.

## ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಲೇವಾದೇವಿ ನಿಬಂಧಕರ ಕಛೇರಿ

ಸಹಕಾರಿ ಇಲಾಖೆಗೆ ಸೇರಿರುವ ಈ ಕಛೇರಿಯು ಸಹಕಾರ ಚಳವಳಿಗೆ ಪ್ರೋತ್ಸಾಹ ನೀಡುವುದು, ಸಹಕಾರ ಸಂಘಗಳ ರಚನೆ ಮತ್ತು ನೋಂದಣಿಗೊಂಡ ಸದಸ್ಯರಿಗೆ ಆರ್ಥಿಕ ನೆರವು ನೀಡಿ ಸದಸ್ಯರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವುದು ಮತ್ತಿತರ ಉದ್ದೇಶಗಳೊಂದಿಗೆ ದಿನಾಂಕ: ೨೪-೮-೧೯೭೦ರಲ್ಲಿ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿತು. ಸಹಕಾರ ಸಂಘಗಳ ಉಪನಿಬಂಧಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರಿಗೆ ಇಬ್ಬರು ಸಹಾಯಕ ಅಭಿವೃದ್ಧಿ ಅಧಿಕಾರಿಗಳು, ಒಬ್ಬ ಅಧೀಕ್ಷಕರು, ಇಬ್ಬರು ಹಿರಿಯ ನಿರೀಕ್ಷಕರು, ಮೂರು ಮಂದಿ ನಿರೀಕ್ಷಕರು, ಇಬ್ಬರು ಪ್ರಥಮ ದರ್ಜೆ ಸಹಾಯಕ, ಒಬ್ಬ ಶೀಘ್ರಲಿಪಿಗಾರ ಹಾಗೂ ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಅಧಿಕಾರಿ ಸಿಬ್ಬಂದಿ ವರ್ಗದವರು ಕಛೇರಿ ಕೆಲಸ ಕಾರ್ಯಗಳಲ್ಲಿ ನೆರವಾಗುತ್ತಿದ್ದಾರೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ೧೯೫೯ರ ನಿಯಮ ೧೯೬೦ ತನ್ನ ಕಛೇರಿ ಕೆಲಸಗಳಲ್ಲಿ ಅನುಸರಿಸುತ್ತಾರೆ. ಸಹಕಾರಿ ಸಂಘಗಳ ಸಹಾಯಕ ನಿಬಂಧಕರು, ಕುಂದಾಪುರ ವಿಭಾಗ, ಕುಂದಾಪುರ ಹಾಗೂ ಸಹಕಾರಿ ಅಭಿವೃದ್ಧಿ ಅಧಿಕಾರಿ ಕಾರ್ಕಳ ತಾಲೂಕು (ಕಾರ್ಕಳ ತಾಲೂಕಿನ ಮೂಡಬಿದ್ರೆ ಫಿರ್ಕಾದ ೨೮ ಗ್ರಾಮಗಳನ್ನು ಹೊರತುಪಡಿಸಿ) ಇವು ಈ ಕಛೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ. ಸಹಕಾರಿ ಸಂಘಗಳ ಜಂಟಿ ನಿಬಂಧಕರು ಮೈಸೂರು, ಕೇಂದ್ರೀಯ ಮೇಲಧಿಕಾರಿಗಳಾಗಿರುತ್ತಾರೆ.

## ಸಾರ್ವಜನಿಕ ಗ್ರಂಥಾಲಯ ಇಲಾಖೆ

ಜಿಲ್ಲೆಯಲ್ಲಿ ವಾಸಿಸುವ ನಾಗರೀಕರಿಗೆ, ನಗರ ತಾಲೂಕು ಮಟ್ಟದಲ್ಲಿ ಹಾಗೂ ಗ್ರಾಮ ಪಂಚಾಯತಿ ಕೇಂದ್ರಗಳಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸುವುದರ ಮೂಲಕ ಸಾರ್ವಜನಿಕರಿಗೆ ಉತ್ತಮ ಗ್ರಂಥಾಲಯ ಸ್ಥಾಪಿಸಿ, ಆ ಮೂಲಕ ಜನರಲ್ಲಿ ಓದುವ ಅಭ್ಯಾಸ ಬೆಳೆಸುವುದು ಕೇಂದ್ರ ಗ್ರಂಥಾಲಯದ ಮಹತ್ವದ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಜಿಲ್ಲೆಯಲ್ಲಿ ೨೦೦೦ನೇ ಇಸವಿಯಲ್ಲಿ ಈ ಕಛೇರಿ ಆರಂಭಗೊಂಡಿತು. ಮುಖ್ಯ ಗ್ರಂಥಾಲಯಾಧಿಕಾರಿ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಇವರಿಗೆ ಇಬ್ಬರು ಗ್ರಂಥಪಾಲಕರು, ಮೂರು ಮಂದಿ ಗ್ರಂಥಾಲಯ ಸಹಾಯಕರು, ಒಬ್ಬ ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿಗಳಿದ್ದು, ಇವರಿಗೆ ಕಛೇರಿ ಕೆಲಸದಲ್ಲಿ ನೆರವಾಗುತ್ತಿದ್ದಾರೆ. ಈ ಕಛೇರಿಯು ೧೯೬೫ರ ಕನಾಟಕ ಸಾರ್ವಜನಿಕ ಗ್ರಂಥಾಲಯ ಕಾಯಿದೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು ಮತ್ತಿತರ ನಿಯಮ, ಅಧಿನಿಯಮಗಳನ್ನು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತದೆ.

ಜಿಲ್ಲೆಯಲ್ಲಿರುವ ಪ್ರತೀ ಗ್ರಾಮ ಪಂಚಾಯಿತಿಗೊಂದು ಗ್ರಂಥಾಲಯ ಪ್ರಾರಂಭಿಸುವುದು ರಾಜಾರಾಂ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನ ಕೋಲ್ಕೋತ್ತಾ ಇವರ ಸಹಾಯಧನದಿಂದಾಗಿ ಮಕ್ಕಳ ಗ್ರಂಥಾಲಯ ಹಾಗೂ ಗ್ರಂಥಾಲಯ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಮತ್ತಿತರ ಯೋಜನೆಗಳನ್ನು ಹೊಂದಿದೆ. ಉಡುಪಿ, ಕಾರ್ಕಳ ಹಾಗೂ ಕುಂದಾಪುರ ತಾಲೂಕುಗಳಲ್ಲಿರುವ ಗ್ರಂಥಾಲಯದ ಗ್ರಂಥಪಾಲಕರು ಮುಖ್ಯ ಗ್ರಂಥಾಲಯಾಧಿಕಾರಿಗಳ ಆಡಳಿತಕ್ಕೆ ಒಳಪಡುತ್ತಾರೆ. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಅವರ ನಿಯಂತ್ರಣಕ್ಕೆ ಇದು ಒಳಪಟ್ಟಿದೆ.

## ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ

ಭಾರತೀಯ ಸೈನಿಕ ಕುಟುಂಬದವರ ಕ್ಷೇಮಾಭಿವೃದ್ಧಿಗಾಗಿ ೧೯೧೭ರಲ್ಲಿ ಭಾರತೀಯ ಸೈನಿಕ ಮಂಡಲಿ ಸ್ಥಾಪಿಸಲಾಯಿತು. ಬಳಿಕ ವಾಯುಸೇನೆ ಮತ್ತು ನೌಕಾದಳಗಳನ್ನು ಈ ಮಂಡಳಿ ವ್ಯಾಪ್ತಿಗೆ ಒಳಪಡಿಸಿದ್ದರಿಂದ Indian Soldiers, Sailors and Airmen's Board ಎಂದು ಪುನರ್ ನಾಮಕರಣ ಮಾಡಲಾಯಿತು. ದೆಹಲಿಯಲ್ಲಿನ ಆಗಿನ ಬ್ರಿಟಿಷ್ ಆಡಳಿತಗಾರರ ಆಶಯದಂತೆ ಸೈನಿಕ ಕಲ್ಯಾಣ ಕಾರ್ಯಕ್ರಮಗಳನ್ನು ಹೆಚ್ಚು ಕ್ಷಿಪ್ರ ಹಾಗೂ ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಮಂಡಳಿಯ ಕಛೇರಿಗಳನ್ನು ತೆರೆಯಲಾಯಿತು. ಆದರೆ, ಭಾರತೀಯರ ಅಧಿಪತ್ಯಕ್ಕೆ ಒಳಪಟ್ಟಿದ್ದ ಪ್ರಾಂತಗಳಲ್ಲಿ ರಾಜ್ಯ ಮಟ್ಟದ ಕಛೇರಿಗಳನ್ನು ಮಾತ್ರ ಪ್ರಾರಂಭಿಸಲಾಯಿತು.

ಸ್ವಾತಂತ್ರ್ಯಪೂರ್ವದಲ್ಲಿ ಮೈಸೂರು ಅರಸರು ತಮ್ಮ ಸಂಸ್ಥಾನದ ಸೈನಿಕರ ಮತ್ತು ಮಾಜಿ ಸೈನಿಕರ ಕ್ಷೇಮಾಭಿವೃದ್ಧಿಗಾಗಿ ಸೈನಿಕ ಮಂಡಳಿಯನ್ನು ಮೈಸೂರಿನಲ್ಲಿ ಸ್ಥಾಪಿಸಿದರು. ಸ್ವಾತಂತ್ರ್ಯಾನಂತರ ಮೈಸೂರು ಸೈನಿಕ ಮಂಡಲಿಯು ಸರಕಾರದ ಗೃಹ ಸಚಿವಾಲಯದ ವ್ಯಾಪ್ತಿಗೆ ಬಂದಿತು. ೧೯೬೩ರಲ್ಲಿ ಈ ಮಂಡಲಿಯು ಸಿಬ್ಬಂದಿಯನ್ನು ಖಾಯಂಗೊಳಿಸಿ, ಸರಕಾರದ ನೌಕರರೆಂದು ಪರಿಗಣಿಸಲಾಯಿತು. ೧೯೭೬ರಲ್ಲಿ ಕೇಂದ್ರ ಸರಕಾರದ ಆದೇಶದಂತೆ ಕರ್ನಾಟಕ ರಾಜ್ಯ ಸೈನಿಕ ಮಂಡಲಿ ಎಂದು ಪುನರ್ ನಾಮಕರಣ ಮಾಡಲಾಯಿತು. ಮುಂದೆ ೧೯೮೦ರಿಂದ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಎಂದು ಬದಲಿಸಲಾಯಿತು. ಸರಕಾರ ಹಾಗೂ ಸೈನಿಕರು ಮತ್ತು ಅವರ ಕುಟುಂಬದವರ ನಡುವೆ ಸೇತುವೆಯಂತಿರುವ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖಾ ಜಿಲ್ಲಾ ಕಛೇರಿಯು ಮಂಗಳೂರಿನಲ್ಲಿದ್ದು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಆಡಳಿತವನ್ನು ನೋಡಿಕೊಳ್ಳುತ್ತಿದೆ. ಉಪನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ನಿವೃತ್ತ ಯೋಧರಿಗೆ ಪುನರ್ ಉದ್ಯೋಗ ಕಲ್ಪಿಸುವುದು, ಅವರ ಅವಲಂಬಿತರಿಗೆ ಶೈಕ್ಷಣಿಕ ಸವಲತ್ತುಗಳನ್ನು ದೊರಕಿಸಿಕೊಡುವುದು, ಎಲ್ಲಾ ನಿವೃತ್ತಯೋಧರ ಜನಗಣತಿ ಹಾಗು ದಾಖಲೆಗಳನ್ನು ಇಂದೀಕರಿಸಿ ಕಾಯ್ದಿರಿಸುವುದು, ಸರಕಾರ ನೀಡುವ ಸವಲತ್ತುಗಳನ್ನು ಸೂಕ್ತವಾಗಿ ಬಳಸಿಕೊಳ್ಳುವಂತೆ ಅಂತಹ ಅರ್ಹರಿಗೆ ಕಾಲಕಾಲಕ್ಕೆ ವಿವಿಧ ಮಾಧ್ಯಮಗಳ ಮೂಲಕ ತಿಳಿಸುವುದು, ಸಶಸ್ತ್ರಬಲ ಬಾವುಟ ದಿನಾಚರಣೆ ನಿಧಿಗಾಗಿ ಬಾವುಟಗಳ ಮಾರಾಟದ ಮೂಲಕ ಹಣ ಸಂಗ್ರಹಿಸುವುದು ಮೊದಲಾದ ಚಟುವಟಿಕೆಗಳನ್ನು ಈ ಕಛೇರಿ ನಿರ್ವಹಿಸುತ್ತದೆ. ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಈ ಇಲಾಖೆಯು ಜಿಲ್ಲೆಯಲ್ಲಿರುವ ದೇವಾಲಯ-ಮಂದಿರಗಳ ಆಡಳಿತ ಉಸ್ತುವಾರಿಯನ್ನು ನೋಡಿಕೊಳ್ಳುವ ಧ್ಯೇಯೋದ್ದೇಶದೊಂದಿಗೆ ದಿನಾಂಕ: ೧೭-೫-೧೯೮೮ ರಲ್ಲಿ ಉಡುಪಿಯಲ್ಲಿ ಪ್ರಾರಂಭಗೊಂಡಿತು. ೧೯೫೬ಕ್ಕೆ ಮೊದಲು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ಕಛೇರಿಯು ಕೊಯಮತ್ತೂರಿನಲ್ಲಿತ್ತು. ಆಗ ಇದು ಈಗಿನ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಮೇಲೂ ನಿಯಂತ್ರಣ ಹೊಂದಿತ್ತು. ಪ್ರಸ್ತುತ ರಾಜ್ಯದಲ್ಲಿ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯಿದೆ ೧೯೯೭, ಅನ್ವಯವಾಗುವಂತೆ ದಿನಾಂಕ:೦೧-೦೫-೨೦೦೩

ರಿಂದ ಜಾರಿಗೆ ಬಂದಿದೆ. ಅದಕ್ಕಿಂತ ಹಿಂದೆ ಈ ಜಿಲ್ಲೆಯಲ್ಲಿ ಮದ್ರಾಸ್ ಹಿಂದೂ ಧಾರ್ಮಿಕ ಮತ್ತು ದತ್ತಿ ಉಂಬಳಿ ಕಾಯಿದೆ ೧೯೫೧ ಜಾರಿಯಲ್ಲಿತ್ತು. ಈ ಕಾಯಿದೆ ಮತ್ತು ನಿಯಮಗಳಿಗನುಸಾರವಾಗಿ ಈ ಇಲಾಖೆಯು ಕಾರ್ಯನಿರ್ವಹಿಸುತ್ತಿದೆ. ಸಹಾಯಕ ಆಯುಕ್ತರು ಈ ಇಲಾಖೆಯ ಮುಖ್ಯಸ್ಥರಾಗಿದ್ದು, ಇವರ ನೆರವಿಗೆ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ಪ್ರಥಮ ದರ್ಜೆ ಪರಿವೀಕ್ಷಕರು, ಶೀಘ್ರಲಿಪಿಗಾರರು, ದ್ವಿತೀಯ ದರ್ಜೆ ಪರಿವೀಕ್ಷಕರು ದ್ವಿತೀಯ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಪ್ರವಾಸಿ ಲೆಕ್ಕಪರಿಶೋಧಕರು ಮತ್ತಿತರ ಸಿಬ್ಬಂದಿಗಳು ಇರುತ್ತಾರೆ.

ಧಾರ್ಮಿಕ ಸಂಸ್ಥೆಗಳ ದೈನಂದಿನ ಆಡಳಿತ ನಿಯಂತ್ರಣಕ್ಕಾಗಿ ವ್ಯವಸ್ಥಾಪನಾ ಸಮಿತಿಗೆ ಸದಸ್ಯರ ನೇಮಕಾತಿ, ಧಾರ್ಮಿಕ ಸಂಸ್ಥೆಗಳ ಖರ್ಚು ವೆಚ್ಚಗಳಿಗೆ, ಸಿಬ್ಬಂದಿ ನೇಮಕಾತಿಗೆ, ಅಭಿವೃದ್ಧಿ ಕಾಮಗಾರಿಗಳ ನಕ್ಷೆ ಹಾಗೂ ಅಂದಾಜು ಪಟ್ಟಿಗಳಿಗೆ ಸಲ್ಲಿಸಲಾಗುವ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡುವುದು, ಕಟ್ಟಡಗಳ ಜೀರ್ಣೋದ್ಧಾರಗಳಿಗೆ ಧನಸಹಾಯ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸುವುದು, ಸಂಸ್ಥೆಗಳ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸುವುದು, ಆಡಿಟ್ ವರದಿಗಳಲ್ಲಿ ಕಂಡು ಬರುವ ಆಕ್ಷೇಪಣೆಗಳಿಗೆ ಸಂಬಂಧಪಟ್ಟವರಿಂದ ಅನುಸರಣಾ ವರದಿಯನ್ನು ಪಡೆದು ನ್ಯೂನತೆಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳುವುದು, ಯಾವುದೇ ದೇವಸ್ಥಾನದ ವಿಚಾರದಲ್ಲಿ ಭಕ್ತಾದಿಗಳಿಂದ ದೂರು ಬಂದಲ್ಲಿ ತನಿಖೆ ನಡೆಸಿ ಸಂಬಂಧಪಟ್ಟದವರ ವಿರುದ್ಧ ಕ್ರಮ ಕೈಗೊಳ್ಳುವುದು ಈ ಕಛೇರಿಯ ಚಟುವಟಿಕೆಗಳ ವ್ಯಾಪ್ತಿಗೆ ಬರುತ್ತದೆ.

ನೂತನ ಕಾಯ್ದೆ ಪ್ರಕಾರ ಧಾರ್ಮಿಕ ಸಂಸ್ಥೆಗಳನ್ನು ಪ್ರವರ್ಗ 'ಎ', 'ಬಿ', 'ಸಿ' ಎಂದು ವರ್ಗೀಕರಿಸಲಾಗಿದ್ದು, ಕ್ರಮವಾಗಿ ಧಾರ್ಮಿಕ ದತ್ತಿ ಆಯುಕ್ತರು, ಜಿಲ್ಲಾಧಿಕಾರಿಗಳು ಮತ್ತು ಸಹಾಯಕ ಆಯುಕ್ತರು ಆಯಾ ವರ್ಗದ ಅಧಿಸೂಚಿತ ಸಂಸ್ಥೆಗಳಿಗೆ ನಿಯಮಿಸಲಾದ ಪ್ರಾಧಿಕಾರಿಯಾಗಿರುವರು. ಒಂದು ಲಕ್ಷಕ್ಕಿಂತ ಕಡಿಮೆ ಆದಾಯವಿರುವ ಸಂಸ್ಥೆಗಳು ಪ್ರವರ್ಗ 'ಸಿ' ಯಡಿಯಲ್ಲಿ ಬರುತ್ತವೆ. ಆ ಸಂಸ್ಥೆಗಳು ಈ ಕಛೇರಿಯ ನೇರ ನಿಯಂತ್ರಣಕ್ಕೆ ಒಳಪಡುತ್ತವೆ. ಪ್ರವರ್ಗ 'ಎ' ಮತ್ತು 'ಬಿ' ಸಂಸ್ಥೆಗಳು ನೇರವಾಗಿ ಈ ಕಛೇರಿಯ ನಿಯಂತ್ರಣಕ್ಕೆ ಒಳಪಡುವುದಿಲ್ಲವಾದರೂ, ಆ ಸಂಸ್ಥೆಗಳಿಗೆ ಸೇರಿದ ಪ್ರಸ್ತಾವನೆಯನ್ನು ಈ ಕಛೇರಿಯ ಮೂಲಕ ಮತ್ತು ಈ ಕಛೇರಿಯ ಶಿಫಾರಸ್ಸಿನೊಂದಿಗೆ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲಾಗುತ್ತದೆ. ಧಾರ್ಮಿಕ ಸಂಸ್ಥೆಗಳಲ್ಲಿರುವ ಬೆಲೆ ಬಾಳುವ ಚಿನ್ನಾಭರಣ ಮತ್ತಿತರ ಚರ ಸ್ವತ್ತುಗಳ ಮತ್ತು ದೇವಾಲಯಗಳಲ್ಲಿ ನಿರ್ವಹಿಸುವ ಲೆಕ್ಕಪತ್ರಗಳನ್ನು ಕಾಲಕಾಲಕ್ಕೆ ತಪಾಸಣೆ ನಡೆಸಿ, ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವುದು. ಈ ಕಛೇರಿಯ ಮುಖ್ಯ ಕೆಲಸವಾಗಿರುತ್ತದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಕೆ.ಸಿ.ಎಸ್.ಆರ್), ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ ೧೯೯೭ ಹಾಗೂ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ನಿಯಮಗಳು ೨೦೦೨ ಮೊದಲಾದ ನಿಯಮ, ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಅನುಸರಿಸುತ್ತದೆ. ಈ ಕಛೇರಿಯ ಅಧೀನದಲ್ಲಿ ಮೂರು ಪರಿವೀಕ್ಷಕರು ಹುದ್ದೆಗಳು ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ತಾಲೂಕು ಮಟ್ಟದಲ್ಲಿ ಸಹಾಯಕ ಆಯುಕ್ತರ ನಿರ್ದೇಶನದಂತೆ ಕಾರ್ಯನಿರ್ವಹಿಸಬೇಕಾಗಿರುತ್ತದೆ.

**೧. ಪರಿವೀಕ್ಷಕರು, ಉಡುಪಿ ವಿಭಾಗ :** ಉಡುಪಿ ತಾಲೂಕಿನ ಕೋಟ ಮತ್ತು ಬ್ರಹ್ಮಾವರ ಹೋಬಳಿಗೆ ಸಂಬಂಧಿಸಿದಂತೆ ಅಧಿಸೂಚಿತ ಧಾರ್ಮಿಕ ಸಂಸ್ಥೆಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಅಧಿಸೂಚಿತ ಸಂಸ್ಥೆಗಳು ಉಡುಪಿ ವಿಭಾಗದ ಪರಿವೀಕ್ಷಕರ ಕಾರ್ಯ ವ್ಯಾಪ್ತಿಗೆ ಬರುತ್ತವೆ. ಈ ಕಛೇರಿಯ ಕೇಂದ್ರ ಕಾರ್ಯಸ್ಥಾನ ಉಡುಪಿ.

**೨. ಪರಿವೀಕ್ಷಕರು, ಕುಂದಾಪುರ ವಿಭಾಗ :** ಕುಂದಾಪುರ ತಾಲೂಕಿನ ಎಲ್ಲಾ ಅಧಿಸೂಚಿತ ಸಂಸ್ಥೆಗಳು ಹಾಗೂ ಉಡುಪಿ ತಾಲೂಕಿನ ಕೋಟ ಮತ್ತು ಬ್ರಹ್ಮಾವರ ಹೋಬಳಿಯ ಅಧಿಸೂಚಿತ ಸಂಸ್ಥೆಗಳು ಈ ಕಛೇರಿಯ ವ್ಯಾಪ್ತಿಗೆ ಬರುತ್ತವೆ. ಇದರ ಕೇಂದ್ರ ಕಾರ್ಯಸ್ಥಾನ ಕುಂದಾಪುರ.

**೩. ಪರಿವೀಕ್ಷಕರು, ಕಾರ್ಕಳ ವಿಭಾಗ :** ಕಾರ್ಕಳ ತಾಲೂಕಿನ ಎಲ್ಲಾ ಅಧಿಸೂಚಿತ ಧಾರ್ಮಿಕ ಸಂಸ್ಥೆಗಳು ಕಾರ್ಕಳ ವಿಭಾಗದ ಪರಿವೀಕ್ಷಕರ ಕಾರ್ಯವ್ಯಾಪ್ತಿಗೆ ಬರುತ್ತವೆ. ಇದರ ಕೇಂದ್ರ ಕಾರ್ಯಸ್ಥಾನ ಕಾರ್ಕಳವಾಗಿರುತ್ತದೆ.

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ಉಡುಪಿ, ಈ ಕಛೇರಿಯು ಉಡುಪಿ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿದ್ದು, ಜಿಲ್ಲಾಧಿಕಾರಿಗಳು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ.

## ರಾಜ್ಯ ಸರ್ಕಾರದ ನಿಗಮ-ಮಂಡಳಿಗಳು

### ಕರ್ನಾಟಕ ನೀರಾವರಿ ನಿಗಮ ನಿಯಮಿತ, ವಾರಾಹಿ, ಯೋಜನಾ ವಿಭಾಗ

ಜಿಲ್ಲೆಯ ಕುಂದಾಪುರ ತಾಲೂಕಿನ ಸಿದ್ದಾಪುರ ಗ್ರಾಮದ ಬಳಿ ಹೊರಿಯಬ್ಬೆ ಎಂಬ ಸ್ಥಳದಲ್ಲಿ ವಾರಾಹಿ ನದಿಗೆ ಅಡ್ಡಲಾಗಿ ಒಂದು ತಿರುವುಗಾಲುವೆ ನಿರ್ಮಿಸಿ (ಡೈವರ್ಷನ್ ವೇರ್) ಇದರ ಮೇಲ್ಭಾಗದಲ್ಲಿರುವ ವಾರಾಹಿ ಭೂಗರ್ಭ ವಿದ್ಯುದಾಗಾರದಿಂದ ದಿನನಿತ್ಯ ಹೊರಬರುವ ೧೧೦೦ ಕ್ಯೂಸೆಕ್ಸ್ ಟೇಲ್‌ರೇಸ್ ನೀರನ್ನು ಉಪಯೋಗಿಸಿಕೊಂಡು ಕುಂದಾಪುರ ಮತ್ತು ಉಡುಪಿ ತಾಲೂಕಿನ ಒಟ್ಟು ೧೫,೭೦೨ ಹೆಕ್ಟೇರು (೩೮,೮೦೦ ಎಕರೆ) ಭೂ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶದೊಂದಿಗೆ ದಿ ೯-೧೨-೧೮೮೨ ರಿಂದ ಕಾರ್ಯನಿರ್ವಹಿಸುತ್ತಿದೆ. ವಾರಾಹಿ ಯೋಜನೆಯಲ್ಲಿ ೧೦,೯೮೭ ಹೆಕ್ಟೇರ್ ಎಡದಂಡೆ ಕಾಲುವೆಯಿಂದ ನೀರಾವರಿ ಸೌಲಭ್ಯ ಹೊಂದಿದ್ದರೆ, ೨೭೨೩ ಹೆಕ್ಟೇರ್ ಏತ ನೀರಾವರಿಯಿಂದ ನೀರಾವರಿಯಾಗಿತ್ತು. ಈ ಯೋಜನೆಗೆ ಆರಂಭದಿಂದ ೨೦೦೬ ಮಾರ್ಚ್ ಅಂತ್ಯಕ್ಕೆ ರೂ. ೬೪೪೭.೧೭ ಲಕ್ಷ ವೆಚ್ಚವಾಗಿತ್ತು. ಕಾರ್ಯಪಾಲಕ ಇಂಜನೀಯರ್‌ರವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರಿಗೆ ಮೂವರು ಸಹಾಯಕ ಇಂಜಿನಿಯರ್‌ಗಳು ಒಬ್ಬ ಅಧೀಕ್ಷಕ, ಒಬ್ಬ ಲೆಕ್ಕಾಧೀಕ್ಷಕ, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಇಬ್ಬರು ಪ್ರಥಮ ದರ್ಜೆ ಲೆಕ್ಕ ಸಹಾಯಕರು, ನಾಲ್ಕು ದ್ವಿತೀಯ ದರ್ಜೆ ಸಹಾಯಕರು, ಮೂವರು ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಒಬ್ಬ ಪ್ರಥಮ ದರ್ಜೆ ಉಗ್ರಾಣಪಾಲಕ, ಇಬ್ಬರು ಪ್ರಥಮ ದರ್ಜೆ ಭೂಮಾಪಕರು, ಮತ್ತಿತರ ಅಧಿಕಾರಿ ಸಿಬ್ಬಂದಿಗಳಿದ್ದು, ಕಛೇರಿ ಕೆಲಸದಲ್ಲಿ ನೆರವಾಗುತ್ತಿದ್ದಾರೆ.

ವಾರಾಹಿ ಯೋಜನಾ ವಿಭಾಗ ಕಛೇರಿಯ ವ್ಯಾಪ್ತಿಗೆ ಬರುವ ಮೂರು ಉಪವಿಭಾಗಗಳ ಕಛೇರಿಗಳ ಉಸ್ತುವಾರಿ ಹಾಗೂ ವಾರಾಹಿ ಯೋಜನೆಯ ಎಡದಂಡೆ ನಾಲೆ ಕಾಮಗಾರಿಯ ಉಸ್ತುವಾರಿ ಹಾಗೂ ನಿರ್ವಹಣೆಯ ಜವಾಬ್ದಾರಿಯನ್ನು ಈ ಕಛೇರಿ ಹೊಂದಿದೆ. ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ ಮತ್ತಿತರ ನಿಗದಿತ ಕಾಯಿದೆ ಹಾಗೂ ನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ಸೂಪರಿಂಟೆಂಡಿಂಗ್ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ವಾರಾಹಿ ಯೋಜನಾ ವೃತ್ತ, ಸಿದ್ದಾಪುರ, ಉಡುಪಿ ಜಿಲ್ಲೆ ಅವರು ಮೇಲಧಿಕಾರಿಗಳಾಗಿದ್ದಾರೆ.

### ಕರ್ನಾಟಕ ರಾಜ್ಯ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ನಗರ ಮತ್ತು ಪಟ್ಟಣಗಳ ಪ್ರದೇಶದಲ್ಲಿ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಮಂಗಳೂರಿನಲ್ಲಿ ೧೪-೦೮-೧೯೭೫ರಿಂದ ಈ ಕಛೇರಿಯು ಕಾರ್ಯ ನಿರ್ವಹಿಸುತ್ತಿದೆ. ಆ ಮೊದಲು ಈ ಕಾರ್ಯಗಳನ್ನು ಜನಾರೋಗ್ಯ ಇಲಾಖೆ (ಪಿ.ಡಬ್ಲ್ಯು.ಡಿ.) ನಿರ್ವಹಿಸುತ್ತಿತ್ತು. ಕಾರ್ಯಕಾರಿ ಅಭಿಯಂತರರು ಅವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಕಾರ್ಯಪಾಲಕ ಅಭಿಯಂತರ, ಪ್ರಥಮ ದರ್ಜೆ ಸಹಾಯಕ ಮೊದಲಾದ ಅಧಿಕಾರಿ, ಸಿಬ್ಬಂದಿ ಅವರ ನೆರವಿಗಿದ್ದಾರೆ. ಮಂಗಳೂರು ಉಪ-ವಿಭಾಗಕ್ಕೆ ಸೇರಿದ ಈ ಕಛೇರಿಯ ಅಧಿಕಾರ ವ್ಯಾಪ್ತಿಯು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳನ್ನು ಒಳಗೊಂಡಿರುತ್ತದೆ. ಕಛೇರಿಯು ಪ್ರಸ್ತುತ ಸುಳ್ಯ ಹಾಗೂ ಬಂಟ್ವಾಳ ಪಟ್ಟಣಗಳ ಒಳಚರಂಡಿ

ಯೋಜನೆ, ಕಾರ್ಕಳ ಹಾಗೂ ಮುಲ್ಕಿ ಪಟ್ಟಣಗಳ ನೀರು ಸರಬರಾಜು ಯೋಜನೆ ಮತ್ತಿತರ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೆತ್ತಿಕೊಂಡಿದೆ. ಕಾರ್ಯಪಾಲಕ ಅಭಿಯಂತರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಸನ ವಿಭಾಗ, ಹಾಸನ ಅವರು ಮೇಲಧಿಕಾರಿಯಾಗಿದ್ದಾರೆ.

## ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಪರಿಸರ ಮತ್ತು ಜೀವಿ ಪರಿಸ್ಥಿತಿಶಾಸ್ತ್ರ ಇಲಾಖೆಗೆ ಸೇರಿದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಛೇರಿಯು ಉಡುಪಿಯಲ್ಲಿ ೨೦೦೪ರಿಂದ ಕಾರ್ಯನಿರ್ವಹಿಸುತ್ತಿದೆ. ೧೯೯೮ರಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಿಂದ ಉಡುಪಿ ಜಿಲ್ಲೆಯು ಪ್ರತ್ಯೇಕಗೊಳ್ಳುವುದಕ್ಕೆ ಮೊದಲು ಈ ಕಛೇರಿಯು ಮಂಗಳೂರಿನಲ್ಲಿ ೧೯೯೧ ರಿಂದ ಕಾರ್ಯಪ್ರವೃತ್ತವಾಗಿತ್ತು. ಆಗ ಉಪ ಪರಿಸರ ಅಧಿಕಾರಿ ಎಂದು ಇದ್ದ ಕಛೇರಿಯ ಮುಖ್ಯಸ್ಥರ ಹುದ್ದೆಯು ೧೯೯೬ ರಿಂದ ಪರಿಸರ ಅಧಿಕಾರಿ ಎಂದು ಬದಲಾವಣೆಗೊಂಡಿರುತ್ತದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಪ್ರಾದೇಶಿಕ ಕಛೇರಿ, ಉಡುಪಿ ಈ ಕಛೇರಿಯು ಉಡುಪಿ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತದೆ. ಪರಿಸರ ಅಧಿಕಾರಿಯು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಉಪ ಪರಿಸರ ಅಧಿಕಾರಿ, ಸಹಾಯಕ ಪರಿಸರ ಅಧಿಕಾರಿ, ಸಹಾಯಕ ಆಡಳಿತ ಅಧಿಕಾರಿ, ಅಧೀಕ್ಷಕ, ಪ್ರಥಮ ದರ್ಜೆ ಸಹಾಯಕ, ದ್ವಿತೀಯ ದರ್ಜೆ ಸಹಾಯಕ, ಕ್ಷೇತ್ರ ಸಹಾಯಕ ಮತ್ತಿತರ ಅಧಿಕಾರಿ, ಸಿಬ್ಬಂದಿ ವರ್ಗ ಕಛೇರಿಯ ಮುಖ್ಯಸ್ಥರ ಕಾರ್ಯನಿರ್ವಹಣೆಯಲ್ಲಿ ನೆರವಾಗುತ್ತಾರೆ.

ಕೈಗಾರಿಕೆಗಳು, ಆಸ್ಪತ್ರೆಗಳು, ಸ್ಥಳೀಯ ಸಂಸ್ಥೆಗಳು ಮೊದಲಾದವು ಜಲ, ವಾಯು, ಭೂಮಿ ಇತ್ಯಾದಿಗಳಿಗೆ ಸಂಬಂಧಿಸಿ ಮಾಲಿನ್ಯ ಮಾಡದಂತೆ ನಿಯಂತ್ರಿಸುವುದು ಹಾಗೂ ಮಾಲಿನ್ಯ ಉಂಟು ಮಾಡುವ ಸಂಸ್ಥೆಗಳ ವಿರುದ್ಧ ಕಾನೂನಿನಂತೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳುವುದು ಈ ಕಛೇರಿಯ ಉದ್ದೇಶವಾಗಿರುತ್ತದೆ. ಇದರ ಅನ್ವಯ ಜಲಮಾಲಿನ್ಯ ನಿಯಂತ್ರಣ ಕಾಯಿದೆ ೧೯೭೪, ವಾಯುಮಾಲಿನ್ಯ ನಿಯಂತ್ರಣ ಕಾಯಿದೆ ೧೯೮೧, ಪರಿಸರ ಸಂರಕ್ಷಣಾ ಕಾಯಿದೆ ೧೯೮೬ ಮತ್ತಿತರ ನಿಯಮ, ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯಗಳಲ್ಲಿ ಅನುಸರಿಸುತ್ತದೆ. ಶಾಲಾ ಮಕ್ಕಳು ಹಾಗೂ ನಾಗರೀಕರಿಗೆ ಸ್ಥಳೀಯ ಪರಿಸರ ಕುರಿತು ಮಾಹಿತಿ ನೀಡುವ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತದೆ. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಅವರು ಮೇಲಧಿಕಾರಿಗಳಾಗಿರುತ್ತಾರೆ.

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

ಪ್ರಯಾಣಿಕರಿಗೆ ಮಿತವ್ಯಯದ ಸಂಚಾರ ಸೌಲಭ್ಯವನ್ನು ಒದಗಿಸುವ ಮುಖ್ಯ ಧ್ಯೇಯೋದ್ದೇಶ ದೊಂದಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಂಗಳೂರು ವಿಭಾಗಕ್ಕೆ ಸೇರಿದ ಕುಂದಾಪುರ ಘಟಕವು ೧೯೮೮ರಲ್ಲಿ ಆರಂಭಗೊಂಡಿತು. ಘಟಕ ವ್ಯವಸ್ಥಾಪಕರು, ಈ ಕಛೇರಿಯ ಮುಖ್ಯಸ್ಥರಾಗಿದ್ದು, ಉಡುಪಿ ಜಿಲ್ಲೆಯ ಉಡುಪಿ ಮತ್ತು ಕುಂದಾಪುರ ತಾಲೂಕುಗಳ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತಾರೆ. ಸಹಾಯಕ ಸಂಚಾರ ಅಧೀಕ್ಷಕರು, ಲೆಕ್ಕಪತ್ರ ಮೇಲ್ವಿಚಾರಕರು, ಆಡಳಿತ ಮೇಲ್ವಿಚಾರಕರು ಪ್ರೋಗ್ರಾಂ ಹೆಡ್ ಮಿನಿಸ್ಟ್ರೇಟರ್, ಸಂಚಾರ ನಿರೀಕ್ಷಕರು, ಸಹಾಯಕ ಸಂಚಾರ ನಿರೀಕ್ಷಕರು, ಸಹಾಯಕರು, ಅಂಕಿ ಅಂಶ ಸಹಾಯಕರು, ಸಹಾಯಕ ಲೆಕ್ಕಿಗ, ಕಿರಿಯ ಸಹಾಯಕ ಮತ್ತು ಬೆರಳಚ್ಚುಗಾರರು, ಸಹಾಯಕ ಉಗ್ರಾಣ ರಕ್ಷಕರು, ಸಂಚಾರ ನಿಯಂತ್ರಕರು ಮತ್ತಿತರ ಅಧಿಕಾರಿ ಸಿಬ್ಬಂದಿ ವರ್ಗದವರು ಘಟಕ ವ್ಯವಸ್ಥಾಪಕರಿಗೆ ಕಛೇರಿಯ ಅಧಿಕೃತ ಕೆಲಸ ಕಾರ್ಯಗಳಲ್ಲಿ ನೆರವಾಗುತ್ತಿದ್ದಾರೆ. ಫ್ಯಾಕ್ಟರೀಸ್ ಆಕ್ಟ್ ಮತ್ತು ಎಂ.ಟಿ.ಡಬ್ಲ್ಯು ಆಕ್ಟ್‌ಗಳನ್ನು ಕಛೇರಿ ಕೆಲಸಗಳಲ್ಲಿ ಅನ್ವಯಗೊಳಿಸಲಾಗುತ್ತಿದೆ. ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಮಂಗಳೂರು ವಿಭಾಗ, ಮಂಗಳೂರು ಇವರು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ.

## ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಕೈಗಾರಿಕೆಗಳ ಸ್ಥಾಪನೆ ಹಾಗೂ ಅಭಿವೃದ್ಧಿಗೆ, ವಾಹನ ಖರೀದಿಸಲು, ಹೋಟೆಲ್ ಉದ್ಯಮ ಸ್ಥಾಪಿಸಲು ಸಾಲ ಸೌಲಭ್ಯ ಒದಗಿಸುವ ಧ್ಯೇಯೋದ್ದೇಶಗಳೊಂದಿಗೆ ೧೯೯೦ರಲ್ಲಿ ಕ್ಷೇತ್ರ ಕಛೇರಿಯಾಗಿ ಸ್ಥಾಪನೆಗೊಂಡಿತು. ನಂತರ ೧೯೯೨ರಲ್ಲಿ 'ಬಿ' ದರ್ಜೆ ಶಾಖಾ ಕಛೇರಿಯಾಗಿ, ೧೯೯೫ ರಿಂದ ಇಲ್ಲಿಯವರೆಗೂ 'ಎ' ದರ್ಜೆ ಶಾಖಾ ಕಛೇರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಕಛೇರಿಯ ಮುಖ್ಯಸ್ಥರ ಹುದ್ದೆಯು ೧೯೯೦ರಲ್ಲಿ ಕ್ಷೇತ್ರಾಧಿಕಾರಿಯಾಗಿಯೂ, ೧೯೯೨ರಲ್ಲಿ ಶಾಖಾ ವ್ಯವಸ್ಥಾಪಕರಾಗಿಯೂ ಹಾಗೂ ೧೯೯೫ ರಿಂದ ಇಲ್ಲಿಯವರೆಗೂ ಸಹಾಯಕ ಪ್ರಧಾನ ವ್ಯವಸ್ಥಾಪಕರಾಗಿಯೂ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರಿಗೆ ಕಛೇರಿಯ ಕೆಲಸ ಕಾರ್ಯಗಳಲ್ಲಿ ನೆರವಾಗಲು ಹಿರಿಯ ವ್ಯವಸ್ಥಾಪಕರು, ಮೂರು ಮಂದಿ ವ್ಯವಸ್ಥಾಪಕರು, ಆರು ಮಂದಿ ಉಪ ವ್ಯವಸ್ಥಾಪಕರು, ಮೂರು ಮಂದಿ ವ್ಯವಸ್ಥಾಪಕರು, ಮೂರು ಮಂದಿ ಸಹಾಯಕರು ಮತ್ತಿತರ ಅಧಿಕಾರಿ ಸಿಬ್ಬಂದಿ ಇದ್ದಾರೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಜಿಲ್ಲಾ ವ್ಯಾಪ್ತಿಯನ್ನು ಹೊಂದಿದ್ದು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಕಾಯ್ದೆ ೧೯೫೧ ಅನ್ನು ತನ್ನ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ. ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಹಾಗೂ ಸೇವಾ ನಿರತ ಘಟಕಗಳಿಗೆ ಸಾಲ ಸೌಲಭ್ಯ ನೀಡುವ ಗುರಿಯನ್ನು ಈ ಇಲಾಖೆ ಹೊಂದಿದ್ದು, ಇದರ ಅಧೀನದಲ್ಲಿ ಯಾವುದೇ ಕಛೇರಿಗಳಿರುವುದಿಲ್ಲ. ಉಪ ಪ್ರಧಾನ ವ್ಯವಸ್ಥಾಪಕರು, ಮಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಗಳಾಗಿದ್ದಾರೆ.

## ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಮಹಾತ್ಮಗಾಂಧೀ ಅವರ ಆಶಯದಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಸಿಗುವ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಗುಡಿಕೈಗಾರಿಕೆಗಳನ್ನು ಬೆಳೆಸಿ, ಉದ್ಯೋಗ ಸೃಷ್ಟಿಸುವುದು, ಆರ್ಥಿಕ ಸ್ವಾವಲಂಬನೆ ಸಾಧಿಸಲು ಗ್ರಾಮೀಣರನ್ನು ಪ್ರೇರೇಪಿಸಿ ಪ್ರೋತ್ಸಾಹಿಸುವುದು ಈ ಮಂಡಳಿ ಸ್ಥಾಪನೆಯ ಧ್ಯೇಯೋದ್ದೇಶವಾಗಿದೆ. ರಾಜ್ಯ ಖಾದಿ ಗ್ರಾಮೋದ್ಯೋಗ ಅಧಿಕಾರಿ ಈ ಕಛೇರಿಯ ಮುಖ್ಯಸ್ಥರಾಗಿದ್ದಾರೆ. ಇವರು ಉಡುಪಿ ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಇವರಿಗೆ ಸಹಾಯಕರಾಗಿ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕ, ತಾಂತ್ರಿಕ ಮೇಲ್ವಿಚಾರಕರು, ತಾಂತ್ರಿಕ ಸಹಾಯಕರು ಮತ್ತಿತರ ಅಧಿಕಾರಿಗಳಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಹಾಗೂ ಗ್ರಾಮೀಣ ಭಾಗದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡುವುದು, ಅದಕ್ಕಾಗಿ ಅಗತ್ಯವಾದ ಸಾಲ, ಸಹಾಯಧನ ಹಾಗೂ ತಾಂತ್ರಿಕ ನೆರವನ್ನು ಒದಗಿಸುವುದು, ಈ ಮೂಲಕ ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಮುಂದಾಗುವುದು ಮೊದಲಾದ ಚಟುವಟಿಕೆಗಳಲ್ಲಿ ತೊಡಗಿದೆ. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯಮ ಮಂಡಳಿಯ ಕಾಯಿದೆ ೧೯೫೭, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ಮತ್ತಿತರ ನಿಯಮ, ಅಧಿನಿಯಮಗಳನ್ನು ತನ್ನ ಕಛೇರಿ ಕೆಲಸಗಳಲ್ಲಿ ಅನುಸರಿಸುತ್ತದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ (ನಿ)

ಸಹಕಾರ ಸಂಘಗಳ ನಿಯಮದನ್ವಯ ನೋಂದಾಯಿಸಲ್ಪಟ್ಟ ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಯಮಿತವು ೧೯೮೬ ರಿಂದ ಮಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ವ್ಯವಸ್ಥಾಪಕ ನಿರ್ದೇಶಕರು, ಈ ಕಛೇರಿಯ ಮುಖ್ಯಸ್ಥರಾಗಿದ್ದು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ವ್ಯಾಪ್ತಿ ಅಡಳಿತಾಧಿಕಾರ ಹೊಂದಿರುತ್ತಾರೆ. ಒಕ್ಕೂಟದ ಸದಸ್ಯ ಸಂಘಗಳ ಉತ್ಪಾದಕರಿಂದ ಉತ್ತಮ ಗುಣಮಟ್ಟದ ಹಾಲನ್ನು ಉತ್ಪಾದಿಸಲು ಪೂರಕವಾದ ಸೌಲಭ್ಯಗಳನ್ನು ಒಕ್ಕೂಟದ ಆರ್ಥಿಕ ಪರಿಸ್ಥಿತಿಗನುಗುಣವಾಗಿ ವಿಸ್ತರಿಸುವುದು ಹಾಗೂ ಗ್ರಾಹಕರಿಗೆ ನಿರಂತರ ಉತ್ತಮ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಒದಗಿಸುವುದು

ಮೊದಲಾದ ಧ್ಯೇಯೋದ್ದೇಶಗಳನ್ನು ಈ ಒಕ್ಕೂಟ ಹೊಂದಿರುತ್ತದೆ. ಈ ಒಕ್ಕೂಟವು ಮಂಗಳೂರು ಕೇಂದ್ರ ಡೈರಿ, ಮಣಿಪಾಲ ಡೈರಿ ಘಟಕ ಹಾಗೂ ಪುತ್ತೂರು ಶಿಥಿಲೀಕರಣ ಕೇಂದ್ರಗಳನ್ನು ತನ್ನ ಅಧೀನದಲ್ಲಿ ಹೊಂದಿದೆ. ಸಹಕಾರಿ ಇಲಾಖೆಯಿಂದ ಅನುಮೋದನೆ ಪಡೆದ ದಕ್ಷಿಣ ಕನ್ನಡ ಹಾಲು ಒಕ್ಕೂಟದ ಅಧೀನ ನಿಯಮಗಳು ೧೯೮೯ ಮೊದಲಾದ ನಿಯಮಗಳನ್ನು ತನ್ನ ಕಛೇರಿ ಕೆಲಸದಲ್ಲಿ ಅನುಸರಿಸುತ್ತದೆ. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ಅವರ ಒಕ್ಕೂಟದ ಮೇಲಾಧಿಕಾರಿಗಳಾಗಿರುತ್ತಾರೆ.

## ದಿ. ದೇವರಾಜ್ ಅರಸು ಹಿಂದುಳಿದ ವರ್ಗಗಳ ಮತ್ತು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ

ಸಾಮಾಜಿಕ ಜೀವನದಲ್ಲಿ ಆರ್ಥಿಕ ಅಸಮಾನತೆಗೆ ಒಳಗಾದ ದುರ್ಬಲ ವರ್ಗಗಳಿಗೆ ಸೇರಿದ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ವರ್ಗದ ಜನರ ಸರ್ವಾಂಗೀಣ ಅಭಿವೃದ್ಧಿಗಾಗಿ ಈ ನಿಗಮ ರೂಪಿಸುವ ವಿವಿಧ ಸಾಲದ ಯೋಜನೆಗಳು, ಗಂಗಾ ಕಲ್ಯಾಣ ಯೋಜನೆ, ವೃತ್ತಿಪರ ತರಬೇತಿ ಯೋಜನೆ ಮೊದಲಾದ ಯೋಜನೆಗಳನ್ನು ಜಿಲ್ಲಾಮಟ್ಟದಲ್ಲಿ ವ್ಯವಸ್ಥಿತವಾಗಿ ಸಮರ್ಪಕವಾಗಿ ಅನುಷ್ಠಾನಗೊಳಿಸುವುದರ ಮೂಲಕ ಈ ದುರ್ಬಲ ವರ್ಗಗಳ ಜನರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಯನ್ನು ಸಾಧಿಸುವ ಮುಖ್ಯ ಧ್ಯೇಯೋದೇಶಗಳೊಂದಿಗೆ ಈ ನಿಗಮವು ದಿನಾಂಕ: ೨೦-೧೦-೨೦೦೦ ರಂದು ಆರಂಭಗೊಂಡಿತು.

ಈ ಕಛೇರಿಯು ಸಮಾಜ ಕಲ್ಯಾಣ ಇಲಾಖೆಗೆ ಸೇರಿದ್ದು, ಉಡುಪಿ ಜಿಲ್ಲಾ ವ್ಯಾಪ್ತಿಯನ್ನು ಹೊಂದಿರುತ್ತದೆ. ಜಿಲ್ಲಾ ವ್ಯವಸ್ಥಾಪಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರಿಗೆ ಪ್ರಥಮ ದರ್ಜೆ ಸಹಾಯಕ, ಕ್ಷೇತ್ರ ಸಹಾಯಕರು, ಕ್ಲರ್ಕ್ ಕಂ ಟೈಪಿಸ್ಟ್ ಮತ್ತಿತರ ಸಿಬ್ಬಂದಿಗಳು ಕಛೇರಿ ಕೆಲಸದಲ್ಲಿ ನೆರವಿಗಿದ್ದಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ನಿಗಮದ ಸೇವಾ ನಿಯಮಗಳನ್ನು ತನ್ನ ಕಛೇರಿ ಕೆಲಸದಲ್ಲಿ ಅನುಸರಿಸುತ್ತಿದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಉಡುಪಿ ಅವರು ಮೇಲಧಿಕಾರಿಯಾಗಿರುತ್ತಾರೆ.

## ಪರಿಶಿಷ್ಟ ಜಾತಿಗಳ ಅಭಿವೃದ್ಧಿ ನಿಗಮ ನಿಯಮಿತ

ದಲಿತ ಅರ್ಹ ಫಲಾನುಭವಿಗಳ ಆರ್ಥಿಕ ಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಜಿಲ್ಲೆಯಲ್ಲಿ ಈ ನಿಗಮವನ್ನು ೧೯೯೯ರಲ್ಲಿ ಪ್ರಾರಂಭಿಸಲಾಯಿತು. ಈ ನಿಗಮವು ನವೆಂಬರ್ ೨೦೦೫ರಿಂದ ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಎಂದು ಪುನರ್ ನಾಮಕರಣಗೊಂಡಿದೆ. ಇದು ಸಮಾಜ ಕಲ್ಯಾಣ ಇಲಾಖೆಗೆ ಸೇರಿದ್ದು, ಜಿಲ್ಲಾ ವ್ಯವಸ್ಥಾಪಕರು ಮುಖ್ಯಸ್ಥರಾಗಿರುತ್ತಾರೆ. ವಸೂಲಾತಿ ಅಧಿಕಾರಿ, ಕಛೇರಿ ಅಧೀಕ್ಷಕರು, ಲೆಕ್ಕ ಸಹಾಯಕರು, ತಾಲೂಕು ಅಭಿವೃದ್ಧಿ ಅಧಿಕಾರಿ, ಪ್ರಥಮ ದರ್ಜೆ ಸಹಾಯಕ, ದ್ವಿತೀಯ ದರ್ಜೆ ಸಹಾಯಕ ಮತ್ತಿತರ ಅಧಿಕಾರಿ ಸಿಬ್ಬಂದಿಗಳು ಅವರಿಗೆ ಆಡಳಿತದಲ್ಲಿ ನೆರವಾಗುತ್ತಿದ್ದಾರೆ. ನಿಗಮವು ಗಂಗಾಕಲ್ಯಾಣ, ಭೂ ಒಡೆತನ, ಸ್ವಯಂ ಉದ್ಯೋಗ, ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ ಮೊದಲಾದ ಉದ್ಯಮಶೀಲತಾ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದಿದೆ. ಇವುಗಳ ಅನುಷ್ಠಾನಕ್ಕೆ ನಿಗಮದ ನಿಯಮಗಳನ್ನೂ, ಆಡಳಿತಾತ್ಮಕ ವಿಷಯಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ನು ಅಳವಡಿಸಿಕೊಂಡಿದೆ. ಈ ಕಛೇರಿಯ ಅಧೀನದಲ್ಲಿ ಯಾವುದೇ ಕೆಳಹಂತದ ಕಛೇರಿಗಳಿರುವುದಿಲ್ಲ. ವ್ಯವಸ್ಥಾಪಕ ನಿರ್ದೇಶಕರು, ಕೇಂದ್ರ ಕಛೇರಿ, ಬೆಂಗಳೂರು ಅವರು ಮೇಲಧಿಕಾರಿಗಳಾಗಿದ್ದಾರೆ.

## ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವಿತರಣಾ ವ್ಯವಸ್ಥೆಯನ್ನು ವಿಭಜಿಸಿ ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ ಹಾಗೂ ಗೆಸ್ಕಾಂಗಳೆಂಬ ನಾಲ್ಕು ಕಂಪನಿಗಳಾಗಿ ೨೦೦೨ರ ಜೂನ್‌ನಲ್ಲಿ ವಿಭಜಿಸಲಾಯಿತು.

ಹೀಗೆ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತವು (ಮೆಸ್ಕಾಂ) ಅಸ್ತಿತ್ವಕ್ಕೆ ಬಂದಿತು. ಆಗ ಈ ಕಂಪನಿಯು ಅಧೀನಕ್ಕೆ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ, ಮಂಡ್ಯ, ಮೈಸೂರು, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳು ಸೇರಿದ್ದವು. ಮತ್ತೆ ೨೦೦೫ರ ಜೂನ್‌ನಲ್ಲಿ ಮೆಸ್ಕಾಂ ಅನ್ನು ಚೆಸ್ಕಾಂ ಹಾಗೂ ಮೆಸ್ಕಾಂಗಳೆಂಬ ಎರಡು ಕಂಪನಿಗಳಾಗಿ ವಿಭಜಿಸಲಾಯಿತು. ಪ್ರಸ್ತುತ ಮೆಸ್ಕಾಂನ ಅಧೀನದಲ್ಲಿ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳು ಬರುತ್ತವೆ. ಪ್ರಸ್ತುತ ಕಾರ್ಯನಿರ್ವಾಹಕ ಇಂಜನಿಯರ್ (ವಿದ್ಯುತ್), ಕಾರ್ಯ ಮತ್ತು ಪಾಲನೆ ವಿಭಾಗ, ಉಡುಪಿ ಈ ಕಛೇರಿಯು ಉಡುಪಿ ಜಿಲ್ಲಾ ವ್ಯಾಪ್ತಿಯನ್ನು ಹೊಂದಿದ್ದು, ಮೆಸ್ಕಾಂ ನಿಯಮಿತದ ಆಡಳಿತಕ್ಕೆ ಒಳಪಟ್ಟಿದೆ. ಕಾರ್ಯನಿರ್ವಾಹಕ ಇಂಜನೀಯರ್ ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರ ಅಧೀನದಲ್ಲಿ ಉಡುಪಿ, ಬ್ರಹ್ಮಾವರ, ಕಾಪು (ಉಡುಪಿ ತಾಲೂಕು), ಕಾರ್ಕಳ (ಕಾರ್ಕಳ ತಾಲೂಕು) ಹಾಗೂ ಕುಂದಾಪುರ ಮತ್ತು ಬೈಂದೂರು (ಕುಂದಾಪುರ ತಾಲೂಕು)ಗಳಲ್ಲಿ ಉಪವಿಭಾಗಾಧಿಕಾರಿಗಳ ಕಛೇರಿಗಳಿವೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ)ಗಳು ಆಯಾ ಉಪವಿಭಾಗದ ಮುಖ್ಯಸ್ಥರುಗಳಾಗಿರುತ್ತಾರೆ. ಕರ್ನಾಟಕ ವಿದ್ಯುತ್ ಸುಧಾರಣಾ ಆಯೋಗ (K.E.R.C.), ವಿದ್ಯುತ್ ಸರಬರಾಜು ವಿತರಣೆ ಕೋಡ್–೨೦೦೦–೦೧, ಬೋರ್ಡ್ ಎಂಪ್ಲಾಯೀಸ್ ಸರ್ವೀಸ್ ರೆಗ್ಯುಲೇಷನ್ ಮತ್ತಿತರ ನಿಯಮ ಅಧಿನಿಯಮಗಳನ್ನು ತನ್ನ ಕಛೇರಿಯ ಕೆಲಸದಲ್ಲಿ ಅನುಸರಿಸುತ್ತಿದೆ. ಅಧೀಕ್ಷಕ ಇಂಜಿನಿಯರ್, ಮಂಗಳೂರು (ಮೆಸ್ಕಾಂ) ಇವರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

## ಕೇಂದ್ರ ಸರ್ಕಾರದ ಕಚೇರಿಗಳು

### ಆಕಾಶವಾಣಿ

ಕೇಂದ್ರ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಸಾರ ಭಾರತಿಗೆ (ಭಾರತೀಯ ಪ್ರಸಾರ ನಿಗಮ) ಸೇರಿದ ಆಕಾಶವಾಣಿ ನಿಲಯ ಕೇಂದ್ರವು ಮಂಗಳೂರಿನಲ್ಲಿ ೧೯೭೬ರಿಂದ ಕಾರ್ಯನಿರ್ವಹಿಸುತ್ತಿದೆ. ಉಡುಪಿ, ದಕ್ಷಿಣ ಕನ್ನಡ ಹಾಗೂ ಕಾಸರಗೋಡು ಜಿಲ್ಲೆಗಳ ಪ್ರಸಾರ ವ್ಯಾಪ್ತಿಯನ್ನು ಹೊಂದಿದ ಈ ನಿಲಯದ ಮುಖ್ಯಸ್ಥರಾಗಿ ನಿಲಯ ನಿರ್ದೇಶಕರಿದ್ದು ಅವರ ನೆರವಿಗೆ ಕಾರ್ಯಕ್ರಮ ನಿರ್ವಾಹಕ, ನಿಲಯ ಅಭಿಯಂತರರು, ಕಾರ್ಯಕ್ರಮ ನಿರ್ಮಾಪಕರು, ಪ್ರಸರಣ ನಿರ್ವಾಹಕ ಮತ್ತಿತರ ಅಧಿಕಾರಿ, ಸಿಬ್ಬಂದಿ ಇದ್ದಾರೆ. ಉಡುಪಿ ಜಿಲ್ಲೆಯ ಬ್ರಹ್ಮಾವರದಲ್ಲಿ ಆಕಾಶವಾಣಿಯ ಮರುಪ್ರಸಾರ ಕೇಂದ್ರವಿದ್ದು, ನಿಲಯ ಅಭಿಯಂತರರು ಅದರ ಮುಖ್ಯಸ್ಥರಾಗಿರುತ್ತಾರೆ.

ಮಾಹಿತಿ, ಶಿಕ್ಷಣ ಮತ್ತು ಮನರಂಜನೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದು, ಸರಕಾರದ ವಿವಿಧ ಅಭಿವೃದ್ಧಿಪರ ಯೋಜನೆಗಳನ್ನು ಕುರಿತಾದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಮೂಲಕ ಅಭಿವೃದ್ಧಿಯಲ್ಲಿ ವೇಗವರ್ಧಕವಾಗಿ ಕೆಲಸ ಮಾಡುವುದು, ಭಾರತೀಯ ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಮೂಲಕ ಈ ಕ್ಷೇತ್ರಗಳ ಪ್ರತಿಭಾವಂತರನ್ನು ಪ್ರೋತ್ಸಾಹಿಸುವುದು ಮೊದಲಾದುವು ಈ ಕಚೇರಿಯ ಮುಖ್ಯ ಧ್ಯೇಯೋದ್ದೇಶಗಳಾಗಿವೆ. ತುಳು ಮತ್ತು ಕೊಂಕಣಿ ಭಾಷಾ ಕಾರ್ಯಕ್ರಮಗಳಿಗೂ ಈ ಕೇಂದ್ರದಲ್ಲಿ ವಿಶೇಷ ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ. ಉಪ ಮಹಾನಿರ್ದೇಶಕರು, ಆಕಾಶವಾಣಿ ಕೇಂದ್ರ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

### ಭಾರತೀಯ ಅಂಚೆ ಇಲಾಖೆ

ಅಂಚೆ ಬಟವಾಡೆ, ತ್ವರಿತ ಅಂಚೆ, ನೋಂದಾಯಿತ ಅಂಚೆ, ವಿಮಾ ಅಂಚೆ, ಸಣ್ಣ ಉಳಿತಾಯ ಯೋಜನೆ, ಡಬ್ಲ್ಯೂ.ಎಂ.ಟಿ. ಮತ್ತಿತರ ಧ್ಯೇಯೋದ್ದೇಶಗಳೊಂದಿಗೆ ಅಂಚೆ ಅಧೀಕ್ಷಕರ ಕಛೇರಿ ಉಡುಪಿ ವಿಭಾಗ ಉಡುಪಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಅದಕ್ಕೂ ಮೊದಲು ೧೯೪೪ರಲ್ಲಿ ಮಲಬಾರ್ ಅಂಚೆ ವಿಭಾಗದಿಂದ ದಕ್ಷಿಣ ಕನ್ನಡ ಅಂಚೆ ವಿಭಾಗವು ಪ್ರತ್ಯೇಕಗೊಂಡಿತು ಹಾಗೂ ೧೯೬೨ರಲ್ಲಿ ಇದನ್ನು ದ್ವಿತೀಯ ದರ್ಜೆಯಿಂದ ಪ್ರಥಮ ದರ್ಜೆಗೆ ಉನ್ನತೀಕರಿಸಲಾಯಿತು. ದಕ್ಷಿಣ ಕನ್ನಡ ಅಂಚೆ ವಿಭಾಗವನ್ನು

೧೯೭೩ರಲ್ಲಿ ಮಂಗಳೂರು, ಪುತ್ತೂರು ಹಾಗೂ ಉಡುಪಿ ಅಂಚೆ ವಿಭಾಗಗಳಾಗಿ ವಿಭಜಿಸಲಾಯಿತು. ಪ್ರಸ್ತುತ ಉಡುಪಿ ಅಂಚೆ ವಿಭಾಗದ ಆಡಳಿತ ವ್ಯಾಪ್ತಿಗೆ ಉಡುಪಿ ಜಿಲ್ಲೆ (ಕಾರ್ಕಳ ತಾಲೂಕನ್ನು ಹೊರತುಪಡಿಸಿ) ಸೇರಿರುತ್ತದೆ. ಅಂಚೆ ಅಧೀಕ್ಷಕರ ಕಛೇರಿ ಉಡುಪಿ ವಿಭಾಗ, ಇದರ ಮುಖ್ಯಸ್ಥರಾಗಿ ಅಂಚೆ ಅಧೀಕ್ಷಕರಿದ್ದು, ಇವರ ನೆರವಿಗೆ ನಾಲ್ಕು ಮಂದಿ ಸಹಾಯಕ ಅಂಚೆ ಅಧೀಕ್ಷಕರು, ಮೂವರು ಅಂಚೆ ನಿರೀಕ್ಷಕರು, (I.P.) ಮೂವರು ಪೋಸ್ಟ್ ಮಾಸ್ಟರ್, ೨೪೨ ಪಿ.ಎ.ಎಸ್. ೧೧೧ ಪೋಸ್ಟ್‌ಮ್ಯಾನ್, ೫೫೨ ಗ್ರಾಮೀಣ ಡಾಗ್ ಸೇವಕ್ ಸಿಬ್ಬಂದಿಗಳಿದ್ದಾರೆ. ಅಂಚೆ ಅಧೀಕ್ಷಕರ ಕಛೇರಿ, ಉಡುಪಿ ವಿಭಾಗದ ಅಧೀನದಲ್ಲಿ ಉಡುಪಿ, ಕುಂದಾಪುರ, ಮಣಿಪಾಲಗಳಲ್ಲಿರುವ ಪ್ರಧಾನ ಅಂಚೆ ಕಛೇರಿಗಳು, ಹಾಗೂ ಅವುಗಳ ವ್ಯಾಪ್ತಿಗೆ ಒಳಪಟ್ಟು ಉಪ ಅಂಚೆ ಕಛೇರಿ ಹಾಗೂ ಶಾಖಾ ಅಂಚೆ ಕಛೇರಿಗಳು ಬರುತ್ತವೆ. ಭಾರತೀಯ ಅಂಚೆ ಇಲಾಖೆ ಆಕ್ಟ್ ೧೮೭೩, ಅಂಚೆ ಕೈಪಿಡಿ ಮತ್ತಿತರ ಕಾಯಿದೆ, ನಿಯಮಗಳನ್ನು ಈ ಕಛೇರಿಯು ಅನುಸರಿಸುತ್ತದೆ. ಪೋಸ್ಟ್ ಮಾಸ್ಟರ್ (ಜನರಲ್), ದಕ್ಷಿಣ ಕರ್ನಾಟಕ ವಲಯ, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

## ಭಾರತೀಯ ಭೂಗರ್ಭ ಸರ್ವೇಕ್ಷಣಾ ಇಲಾಖೆ

ಭಾರತೀಯ ಭೂಗರ್ಭ ಸರ್ವೇಕ್ಷಣೆ, ಸಾಗರ ಭೂವಿಜ್ಞಾನ ವಿಭಾಗವು ಕೇಂದ್ರ ಸರಕಾರದ ಗಣಿ ಮಂತ್ರಾಲಯ (ಇಲಾಖೆ)ಕ್ಕೆ ಸೇರಿದ್ದಾಗಿದೆ. ವಿಶ್ವದಲ್ಲಿಯೇ ಅತ್ಯಂತ ಹಳೆಯ ವೈಜ್ಞಾನಿಕ ಸಂಸ್ಥೆಗಳಲ್ಲಿ ಒಂದೆನಿಸಿದ ಈ ಭಾರತೀಯ ಭೂಗರ್ಭ ಸರ್ವೇಕ್ಷಣೆಯು ೧೯೭೦ರ ದಶಕದಲ್ಲಿ ಕಡಲಭಾಗದ ಚಿಕ್ಕ ನೆಲೆಯಲ್ಲಿ ತನ್ನ ಚಟುವಟಿಕೆಯನ್ನು ಆರಂಭಿಸಿತು. ಈ ಚಟುವಟಿಕೆಯನ್ನು ೧೯೮೦ರ ದಶಕದಲ್ಲಿ ದೊಡ್ಡ ಮಟ್ಟದಲ್ಲಿ ವಿಸ್ತರಿಸುವ ಕಾರ್ಯಕ್ರಮ ಹಮ್ಮಿಕೊಂಡಾಗ ಪಶ್ಚಿಮ ಕರಾವಳಿಯ ಸಾಗರ ಭೂವಿಜ್ಞಾನ ಯೋಜನೆಗಳಿಗೆಂದೇ ಮಂಗಳೂರಿನಲ್ಲಿ ಕಚೇರಿಯನ್ನು ಪ್ರಾರಂಭಿಸಿತು. ಕೊಲ್ಕತ್ತಾದಲ್ಲಿ ಮುಖ್ಯ ಕಾರ್ಯಾಲಯವಿರುವ ಈ ಮಂಗಳೂರು ಕಚೇರಿಯ ಈಗಿನ ಅಧಿಕಾರ ವ್ಯಾಪ್ತಿಯು ತಾಂತ್ರಿಕವಾಗಿ ಗುಜರಾತ್ ಕರಾವಳಿತೀರದಿಂದ ಕನ್ಯಾಕುಮಾರಿ, ತೂತುಕುಡಿ ಮುಖಾಂತರ ಮನ್ನಾರ್ ಕೊಲ್ಲಿಯಲ್ಲಿ ರಾಮೇಶ್ವರದವರೆಗೆ ಇರುತ್ತದೆ. ಉಪ ಮಹಾನಿರ್ದೇಶಕರು ಈ ಕಚೇರಿಯ ಮುಖ್ಯಸ್ಥರಾಗಿದ್ದು ಅವರ ನೆರವಿಗೆ ನಿರ್ದೇಶಕರು, ಭೂವಿಜ್ಞಾನಿಗಳು, ಸಹಾಯಕ ರಸಾಯನ ವಿಜ್ಞಾನಿ, ನಕಾಶೆಗಾರ, ಭೂಮಾಪಕ ಮೊದಲಾದ ಅಧಿಕಾರಿ, ಸಿಬ್ಬಂದಿಗಳಿದ್ದಾರೆ.

ಭಾರತೀಯ ಭೂಗರ್ಭ ಸರ್ವೇಕ್ಷಣಾ ಇಲಾಖೆಯ ಸಾಗರ ಭೂವಿಜ್ಞಾನ ವಿಭಾಗಕ್ಕೆ ಸೇರಿದ ಈ ಕಚೇರಿಯು ಭಾರತ ಮತ್ತು ಅದರ ತೀರಪ್ರದೇಶದ ಭೂಗರ್ಭ, ಭೂಭೌತ ಮತ್ತು ಭೂರಾಸಾಯನಿಕ ವಿಷಯಗಳಿಗೆ ಸಂಬಂಧಿಸಿದ ಭೂಪಟಗಳನ್ನು ತಯಾರಿಸುವ ಮತ್ತು ಇಂದೀಕರಿಸುವ, ಖನಿಜ ಮತ್ತು ಶಕ್ತಿ ಸಂಪನ್ಮೂಲವನ್ನು ಶೋಧಿಸುವುದು ಹಾಗೂ ನಿಷ್ಕರ್ಷಿಸುವುದನ್ನು ಪ್ರಮುಖ ಧ್ಯೇಯೋದ್ದೇಶವನ್ನಾಗಿ ಹೊಂದಿದೆ. ಪ್ರಚಾಲನೆ: ಪಶ್ಚಿಮ ಕರಾವಳಿ–೧ (Operation: West Coast) ಎಂಬ ಮಂಗಳೂರಿನ ಈ ಕಚೇರಿಯು ಪ್ರತೀವರ್ಷ ಕೇಂದ್ರೀಯ ಭೂವೈಜ್ಞಾನಿಕ ಕಾರ್ಯಕ್ರಮ ಸಲಹಾ ಮಂಡಲಿಯ ಅನುಮೋದನೆಯೊಂದಿಗೆ ಪೂರ್ವನಿರ್ಧಾರಿತ ಕಾರ್ಯಕ್ರಮಗಳನ್ನು ಅರಬ್ಬೀಸಮುದ್ರದ ಭಾರತ ಸಾರ್ವಭೌಮ ಜಲವಲಯದಲ್ಲಿ (territorial water zone), ವ್ಯಾವರ್ತಕ ಆರ್ಥಿಕ ವಲಯ (Exclusive Economic Zone) ದಲ್ಲಿ ಅನುಷ್ಠಾನಗೊಳಿಸುತ್ತದೆ. ಆರ್.ವಿ.ಸಮುದ್ರ ಮಥನ ಎಂಬ ದೊಡ್ಡ ಹಡಗಿನಲ್ಲಿಯೂ, ಪಶ್ಚಿಮ ಕರಾವಳಿಯ ಸಮುದ್ರ ಅಧ್ಯಯನಕ್ಕೆಂದೇ ಇರುವ ಆರ್.ವಿ.ಸಮುದ್ರಶೋಧಿಕಾಮ ಎಂಬ ಚಿಕ್ಕ ಹಡಗಿನಲ್ಲಿಯೂ ಪೂರ್ವನಿರ್ಧಾರಿತ ಸಮುದ್ರ ಪರ್ಯಟನೆಗಳನ್ನು ಕೈಗೊಂಡು ತಳದಲ್ಲಿನ ಗಷ್ಟುಗಳ ಮತ್ತು ಖನಿಜಗಳ ಸಂಶೋಧನೆ, ಪರಿಶೋಧನೆ, ಅಧ್ಯಯನ, ರಾಸಾಯನಿಕ ವಿಶ್ಲೇಷಣೆ, ನಿರೂಪಣಾ ಪಟಗಳ ತಯಾರಿ, ಸೂಕ್ಷ್ಮ ಜೈವಿಕ ಪಳೆಯುಳಿಕೆಗಳ ಪರೀಕ್ಷೆ, ಸಮುದ್ರತಳದ ಆಳದ ಮಟ್ಟ ಮತ್ತು ಅದರ ಕೆಳಗಿರುವ ಭೂಭೌತಿಕ ಪದರುಗಳ ವಿವೇಚನಾ ಪರ ವಿಶ್ಲೇಷಣೆ ಮುಂತಾದವುಗಳನ್ನು ತನ್ನ ಕಾರ್ಯಕ್ಷೇತ್ರದಲ್ಲಿ ನಡೆಸಿಕೊಡುವುದು ಮೊದಲಾದ ಚಟುವಟಿಕೆಗಳನ್ನು ಕೈಗೊಳ್ಳುತ್ತದೆ. ಉಪ–ಮಹಾನಿರ್ದೇಶಕ ಹಾಗೂ

ವಿಭಾಗೀಯ ಮುಖ್ಯಸ್ಥ, ಸಾಗರವಿಭಾಗ, ಭಾರತೀಯ ಭೂಗರ್ಭ ಸರ್ವೇಕ್ಷಣೆ, ಕೊಲ್ಕತ್ತಾ ಅವರು ಮೇಲಧಿಕಾರಿಯಾಗಿರುತ್ತಾರೆ.

## ಕ್ಷೇತ್ರ ಪ್ರಚಾರ ನಿರ್ದೇಶನಾಲಯ

ಕೇಂದ್ರ ಸರಕಾರದ ವಾರ್ತಾ ಮತ್ತು ಪ್ರಚಾರ ಮಂತ್ರಾಲಯಕ್ಕೆ ಸೇರಿದ ಕ್ಷೇತ್ರ ಪ್ರಚಾರ ನಿರ್ದೇಶನಾಲಯದ ಜಿಲ್ಲಾ ಕಚೇರಿಯು ಮಂಗಳೂರಿನಲ್ಲಿ ೧೯೭೭ರಿಂದ ಕ್ಷೇತ್ರ ಪ್ರಚಾರ ಕಚೇರಿ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲಾ ವ್ಯಾಪ್ತಿಯ ಅಧಿಕಾರ ಹೊಂದಿರುವ ಕ್ಷೇತ್ರ ಪ್ರಚಾರ ಅಧಿಕಾರಿಯು ಈ ಕಚೇರಿಯ ಮುಖ್ಯಸ್ಥರಾಗಿದ್ದು, ಅವರ ನೆರವಿಗೆ ತಾಂತ್ರಿಕ ಸಹಾಯಕ ಮೊದಲಾದ ಸಿಬ್ಬಂದಿ ಇದ್ದಾರೆ. ಕೇಂದ್ರ ಸರಕಾರದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಪ್ರಚಾರ ಮಾಡುವುದು ಆ ಮೂಲಕ ಜನರಲ್ಲಿ ಅರಿವು ಮೂಡಿಸುವುದು ಈ ಕಚೇರಿಯ ಪ್ರಮುಖ ಕಾರ್ಯೋದ್ದೇಶವಾಗಿದೆ. ಜಂಟಿ ನಿರ್ದೇಶಕರು, ಬೆಂಗಳೂರು ಅವರು ಮೇಲಧಿಕಾರಿಯಾಗಿರುತ್ತಾರೆ.

* * * * *